ಅಚಲ

ಮಾರ್ಚ್ 2000

ತಿಂಗಳ ಪತ್ರಿಕೆ

ಒಳಗೇನಿದೆ ?

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 14 ಸಂಚಿಕೆ - 3

ಸಂಪಾದಕ ಮಂಡಲಿ
ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಬಿ. ಎನ್. ಸುಮಿತ್ರಾಬಾಯಿ
ಶಾಂತಾನಾಗರಾಜ್
ಹೆಚ್. ಎನ್: ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು
ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by Dr. N. Gayathri

Published by Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಕಳೆದ 14 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)
ಆಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಗಮನಿಸಿ

ಅಚಲ ವಿಳಾಸ ಬದಲಾಗಿದೆ

108, ಸ್ಕೈಲೈನ್ ಸುರಭಿ, 14-ಬಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಹೋರಾಟಗಾರ್ತಿ ಗೀತಾ ಮುಖರ್ಜಿ ಇನ್ನಿಲ್ಲ

ಹಿರಿಯ ಪಾರ್ಲಿಮೆಂಟ್ ಸದಸ್ಯೆ, ಕಮ್ಯೂನಿಸ್ಟ್ ಚಳುವಳಿಯ ಮುಂದಾಳು, ದುರ್ಬಲರ ಹಾಗೂ ಶೋಷಿತರ ಪರ ಹೋರಾಟಗಾರ್ತಿ ಹಾಗೂ ಇತ್ತೀಚಿನ ದಿನಗಳಲ್ಲಿ ಮಹಿಳಾ ಮೀಸಲಾತಿಯ ಪ್ರಬಲ ಸಮರ್ಥಕಿಯಾಗಿ ಪ್ರಖರವಾಗಿ ಬೆಳಗಿದ ಗೀತಾ ಮುಖರ್ಜಿ ಮಾರ್ಚ್ 4ರಂದು ಕೊನೆಯುಸಿರೆಳೆದದ್ದು ಭಾರತದ ರಾಜಕೀಯ ನಕ್ಷೆಯಲ್ಲಿ ದೈತ್ಯ ಪ್ರತಿಭೆಯೊಂದರ ಅಸ್ತಂಗತವಾದಂತಾಗಿದೆ.

ಗೀತಾ ಮುಖರ್ಜಿ, ಎಲ್ಲರಿಗೂ ಪ್ರೀತಿಯ ಗೀತಾದಿ ಹುಟ್ಟಿನಿಂದಲೇ ಹೋರಾಟಗಾರ್ತಿ. ಈಗಿನ ಬಾಂಗ್ಲಾದೇಶದ ಜೆಸ್ಸೂರ್‌ನಲ್ಲಿ ಪ್ರಖ್ಯಾತ ರಾಷ್ಟ್ರೀಯವಾದಿ ವಕೀಲರಾಗಿದ್ದ ರಾಯ್ ಚೌಧರಿಯ ಮಗಳಾಗಿ 1924ರ ಜನವರಿ 8ರಂದು ಜನಿಸಿದ ಗೀತಾ, ವಿದ್ಯಾರ್ಥಿ ಸಂಘಟನೆಯ ನೇತಾರನಾಗಿದ್ದ ಅಣ್ಣನ ಹೆಜ್ಜೆಗಳಲ್ಲೇ ತಾನೂ ನಡೆದು ಹದಿನೈದು ವರ್ಷಕ್ಕೆ ವಿದ್ಯಾರ್ಥಿ ನಾಯಕಿಯೆನಿಸಿಕೊಂಡರು. 1942ರಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿಕೊಂಡು, ಕಮ್ಯೂನಿಸ್ಟ್ ನಾಯಕರಾಗಿದ್ದ ವಿಶ್ವನಾಥ ಮುಖರ್ಜಿಯವರ ಬಾಳಸಂಗಾತಿಯಾದರು. 1947ರಿಂದ 1951ರ ವರೆಗೆ ಬಂಗಾಳ ಪ್ರಾಂತ್ಯದ ವಿದ್ಯಾರ್ಥಿ ಸಂಘಟನೆಗೆ ಕಾರ್ಯದರ್ಶಿಯಾಗಿ ದುಡಿದರು.

1945ರ ಸಮಯ, ಆಗ ತಾನೆ ಗೀತಾ ಮುಖರ್ಜಿ ಕಲ್ಕತ್ತ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದರು. ಎರಡನೆಯ ವಿಶ್ವ ಸಮರ ಮುಗಿದಿತ್ತು. ಬ್ರಿಟಿಷರ ವಿರುದ್ಧ ಭಾರತೀಯರ ಸ್ವಾತಂತ್ರ್ಯ ಹೋರಾಟದ ಕಿಚ್ಚು ಉತ್ಕರ್ಷದಲ್ಲಿತ್ತು. ಆಗ ಇಂಡಿಯನ್ ನ್ಯಾಷನಲ್ ಆರ್ಮಿಯ ಮೂವರು ನಾಯಕರಾದ ಶಾ ನವಾಬ್, ಧಿಲ್ಲನ್ ಮತ್ತು ಸೆಹಗಾಲ್‌ರನ್ನು ಬಂಧನದಿಂದ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿ ವಿದ್ಯಾರ್ಥಿ ಸಮೂಹ ಹೋರಾಟ ನಡೆಸಿತ್ತು. ವಿದ್ಯಾರ್ಥಿಗಳ ಹೋರಾಟದ ಸದ್ದಡಗಿಸಲು ಪೋಲಿಸರು ಗುಂಡಿನ ಮಳೆಗರೆದರು. ಹಲವಾರು ಸಾವು ನೋವುಗಳಾದವು. ಪೋಲಿಸರ ಲಾಠಿ ದಾಳಿಯನ್ನು ಲೆಕ್ಕಿಸದೆ ಸಾವಿರಾರು ವಿದ್ಯಾರ್ಥಿಗಳು ಹಗಲು ರಾತ್ರಿಯೆನ್ನದೆ ಧರಣಿ ನಡೆಸುತ್ತಾ ಕುಳಿತಿದ್ದರು. ವಿದ್ಯಾರ್ಥಿಗಳ ಈ ವೀರಾವೇಶ ಬ್ರಿಟಿಷರಿಗೆ ನುಂಗಲಾರದ ತುತ್ತಾಗಿತ್ತು; ಬ್ರಿಟಿಷ್ ವಿರೋಧಿ ಶಕ್ತಿಗಳ ಪರಿಚಯ ಮಾಡಿಸಿತು. ಈ ಚರಿತ್ರಾರ್ಹ ಹೋರಾಟದ ಮುಂಚೂಣಿಯಲ್ಲಿ ಗೀತಾ ಮುಖರ್ಜಿ ಒಬ್ಬರಾಗಿದ್ದರು. 1946ರಲ್ಲಿ ಐಎನ್‌ಎಯ ಕ್ಯಾಪ್ಟನ್ ರಶೀದ್‌ರ ಬಿಡುಗಡೆಗೆ ಒತ್ತಾಯಿಸಿ ಕಲ್ಕತ್ತೆಯಲ್ಲಿ ಬೃಹತ್ ಹೋರಾಟ ನಡೆದಿತ್ತು. ಆಗ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಾವನ್ನಪ್ಪಿದರು. ಆಗಲೂ ವಿದ್ಯಾರ್ಥಿಗಳನ್ನು ಸಂಘಟಿಸುವುದರಲ್ಲಿ ಗೀತಾ ಮುಖರ್ಜಿ ಮುಂದಿದ್ದರು.

1948ರಲ್ಲಿ ಪಶ್ಚಿಮ ಬಂಗಾಳದಲ್ಲಿ ಬಿ.ಸಿ. ರಾಯ್ ಮಂತ್ರಿ ಮಂಡಳವು ಕಮ್ಯೂನಿಸ್ಟ್ ಪಕ್ಷವನ್ನು ನಿಷೇಧಿಸಿದಾಗ ಹಲವಾರು ಕಮ್ಯೂನಿಸ್ಟರು ಬಂಧನಕ್ಕೊಳಗಾದರು. ಆಗ ಪತಿ ವಿಶ್ವನಾಥ ಮುಖರ್ಜಿಯವರೊಂದಿಗೆ ಗೀತಾ ಮುಖರ್ಜಿಯವರು 6 ತಿಂಗಳಿಗೂ ಹೆಚ್ಚು ಕಾಲ ಸೆರೆಮನೆಯಲ್ಲಿದ್ದರು. ಆ ನಂತರ ಎರಡು ಬಾರಿ ಪೋಲಿಸರ ಕಣ್ಣು ತಪ್ಪಿಸಿ ಅಜ್ಞಾತವಾಸ ಅನುಭವಿಸಿದ್ದರು. 1951ರಲ್ಲಿ ಅವರ ಮೇಲಿದ್ದ ಸೆರೆಮನೆಯ ವಾರಂಟ್ ರದ್ದಾದ ನಂತರ ಮಿದ್ನಾಪುರಕ್ಕೆ ತೆರಳಿ ಅಲ್ಲಿದ್ದ ರೈತರನ್ನು, ಅದರಲ್ಲೂ ವಿಶೇಷವಾಗಿ ರೈತ ಮಹಿಳೆಯರನ್ನು ಸಂಘಟಿಸುವ ಕಾರ್ಯದಲ್ಲಿ ತೊಡಗಿದರು.

ಗೀತಾ ಮುಖರ್ಜಿಯವರ ಜನಪರ ಚಟುವಟಿಕೆಗಳಿಗೆ ಸಿಕ್ಕ ಪ್ರೋತ್ಸಾಹದ ಫಲವಾಗಿ 1967 ರಿಂದ 1972ರ ವರೆಗೆ ಮೂರು ಬಾರಿ ಕಲ್ಕತ್ತೆಯ ಶಾಸನಸಭೆಗೆ ಚುನಾಯಿತರಾದರು. ನಂತರ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿಯಾಗಿ 1980 ರಿಂದ 1999ರ ವರೆಗೆ ಸುಮಾರು 7 ಬಾರಿ ಪಾರ್ಲಿಮೆಂಟರಿ ಸ್ಥಾನಕ್ಕೆ ಪುನ್ಸ್ಕುರಾ ಕ್ಷೇತ್ರದಿಂದ ಚುನಾಯಿತರಾದರು. ಅವರು ಸದಾ ತಮ್ಮ ಕ್ಷೇತ್ರದ ಮೂಲೆ ಮೂಲೆಯ ಹಳ್ಳಿಹಳ್ಳಿಗೂ ಸಂಚರಿಸಿ ಜನರ ಕಷ್ಟಸುಖಗಳನ್ನು ವಿಚಾರಿಸುತ್ತಾ ನಿಜವಾದ ಜನಪ್ರತಿನಿಧಿಯೆನಿಸಿಕೊಂಡರು. ಅವರು ದೀರ್ಘಕಾಲದ ಪಾರ್ಲಿಮೆಂಟರಿ ಸದಸ್ಯೆಯಾಗಿದ್ದ ಕಾರಣ ಹಲವಾರು ಸಮಿತಿಗಳಿಗೆ ನಾಮಕರಣಗೊಂಡಿದ್ದರು. ಈ ಕಾರಣದಿಂದ ದೇಶದ ಉದ್ದಗಲಕ್ಕೂ ಸಂಚರಿಸಿ ಜನರ ನಾಡಿಮಿಡಿತವನ್ನು ಅರಿತ ಅಸಾಮಾನ್ಯ ನಾಯಕಿಯಾಗಿದ್ದರು. ಈ ನಿಟ್ಟಿನಲ್ಲಿ ಅವರಿಗೆ ದೊರೆತ ಕೊನೆಯ ಕರ್ತವ್ಯ - ಮಹಿಳೆಯರಿಗೆ ಪಾರ್ಲಿಮೆಂಟ್ ಮತ್ತು ಶಾಸನ ಸಭೆಗಳಲ್ಲಿ ದೊರೆತ ರಾಜಕೀಯ ಮೀಸಲಾತಿ ಕುರಿತ ಜಂಟಿ ಆಯ್ಕೆ ಸಮಿತಿಯ ಮುಖಂಡತ್ವ. ಅದಕ್ಕಾಗಿ ಅವರು ತಮ್ಮ ಉಸಿರಿರುವವರೆಗೂ ಹೋರಾಡುತ್ತಲೇ ಸಾವನ್ನಪ್ಪಿದರು.

ಗೀತಾ ಮುಖರ್ಜಿಯವರ ಸಾರ್ವಜನಿಕ ಜೀವನವನ್ನು ಹತ್ತಿರದಿಂದ ಬಲ್ಲವರೆಲ್ಲರೂ ಅವರನ್ನು ಇಷ್ಟಪಡುತ್ತಿದ್ದುದು

ಎರಡು ಕಾರಣಕ್ಕೆ. ಒಂದು, ಅವರ ಸರಳತೆ ಮತ್ತು ಸಾಮಾಜಿಕ ನಿಷ್ಠೆಗಾಗಿ ಮತ್ತೊಂದು ದಣಿವರಿಯದ ಅವರ ಚೈತನ್ಯಶೀಲ ಹೋರಾಟದ ಬದುಕಿನ ರೀತಿಗೆ. ಹೃದ್ರೋಗಿಯಾಗಿ, ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದರೂ ಅವರ ಬಿಡುವಿಲ್ಲದ ಚಟುವಟಿಕೆಗಳಿಗೆ ವಿರಾಮವೇ ಇರಲಿಲ್ಲ. ಸಾವಿನ ಕೊನೆಗಳಿಗೆಯವರೆಗೂ ಬಿಡುವಿಲ್ಲದೆ ದುಡಿದವರು ಅವರು. ಅವರ ಕೊನೆಯ ರಾತ್ರಿ ಮಾರ್ಚ್ 3 ರಂದು ರಾತ್ರಿ 1 ಗಂಟೆಯವರೆಗೂ ಅಲಿಘರ್‌ನಲ್ಲಿ ಅವರು ಮಂಡಿಸಬೇಕಿದ್ದ ಪ್ರಬಂಧದ ಬಗ್ಗೆ ತಯ್ಯಾರಿ ನಡೆಸುತ್ತಿದ್ದರು. 'ಶಿಕ್ಷಣ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ಉದ್ಭವಿಸುತ್ತಿರುವ ಮತೀಯ ಮತ್ತು ಫ್ಯಾಸಿಸ್ಟ್ ಶಕ್ತಿಗಳ ಅಪಾಯ' ಕುರಿತು ಅವರು ಪ್ರಬಂಧ ಮಂಡಿಸಬೇಕಿತ್ತು. ಆದರೆ ಇದು ಸಾಧ್ಯವಾಗುವ ಮುನ್ನವೇ ಈ ಲೋಕದಿಂದ ನಿರ್ಗಮಿಸಿದರು.

ಹಿಂದಿನ ದಿನ ಲೋಕಸಭೆಯಲ್ಲಿ ರಾಜಕೀಯ ಜೀವನದಲ್ಲಿ ಆರ್.ಎಸ್.ಎಸ್‌ನ್ನು ನಿರ್ಣಯವೊಂದನ್ನು ಮಂಡಿಸಿದ್ದರು. ಅದರ ಚರ್ಚೆಯಲ್ಲಿ ಭಾಗವಹಿಸುತ್ತಾ ಈ ವಿಷಯದ ಬಗ್ಗೆ ಇನ್ನೂ ವ್ಯಾಪಕವಾದ ಚರ್ಚೆಯಾಗಬೇಕೆಂದು ಒತ್ತಾಯಿಸಿದ್ದರು.

ಹುಟ್ಟು ಹೋರಾಟಗಾರ್ತಿಯಾದ ಗೀತಾ ಮುಖರ್ಜಿ ಎಂದೂ ಪೋಲೀಸರ ಗುಂಡಿಗೆ, ಲಾಠಿಗೆ ಹೆದರಿದವರೇ ಅಲ್ಲ. ಅವರಿಗೆ ಒದಗಿದ ಸೆರೆಮನೆವಾಸದ ಸಂದರ್ಭಗಳು ಹಲವಾರು. ಇವು ಯಾವುವೂ ಅವರ ಹೋರಾಟದ ಕಿಚ್ಚನ್ನು ನಂದಿಸಲಿಲ್ಲ. ಆದರೆ ಇಂತಹ ಅಮೋಘ ಹೋರಾಟಗಾರ್ತಿಯ ಹೃದಯವೂ ಅಷ್ಟೇ ಕೋಮಲವಾದದ್ದು. ಕಾವ್ಯಕ್ಕೆ ಸ್ಪಂದಿಸುವ ಸಾಹಿತ್ಯ ಪ್ರೇಮಿ ಗೀತಾ ಆಗಿದ್ದರು. ರವೀಂದ್ರನಾಥಠಾಗೋರ್, ಕಾಜಿ ನಜರುಲ್ ಇಸ್ಲಾಂ, ಸುಕಾಂತ ಭಟ್ಟಾಚಾರ‍್ಯರವರ ಸಾಹಿತ್ಯಗಳು ಗೀತಾ ಮುಖರ್ಜಿಯವರ ಸ್ಫೂರ್ತಿಯ ಸೆಲೆಗಳಾಗಿದ್ದವು. ತೊಂಭತ್ತರ ದಶಕದಲ್ಲಿ ಕೋಮುಜ್ವಾಲೆಯ ಉರಿ ಎಲ್ಲೆಲ್ಲೂ ಭರದಿಂದ ವ್ಯಾಪಿಸಿದ್ದಾಗ ಗೀತಾಮುಖರ್ಜಿ ಲೋಕಸಭೆಯಲ್ಲಿ ಟ್ಯಾಗೋರರ 'ಭಾರತ-ತೀರ್ಥ'ದ ಕಾವ್ಯದ ಸಾಲುಗಳನ್ನು ಗಟ್ಟಿಯಾಗಿ ಹಾಡಿ ತೋರಿಸಿದರು. ಭಾರತ ತೋರಬೇಕಾದ ಜಾತ್ಯಾತೀತ ಸಂಸ್ಕೃತಿಯ ಅಂಶಗಳನ್ನು ಈ ಹಾಡಿನ ಮೂಲಕ ನೆನಪಿಸಿದರು. ಸಾಹಿತ್ಯ ಪ್ರೇಮಿಯಾಗಿದ್ದ ಗೀತಾಮುಖರ್ಜಿ ಹಲವಾರು ಕೃತಿಗಳ ಕರ್ತೃವಾಗಿದ್ದರು. 'ಭಾರತ ಉಪಕಥಾ', 'ಚೋತೋದರ್ ರವೀಂದ್ರನಾಥ್' ಮತ್ತು 'ಹೇ ಅತಿತ್ ಕಥಾ ಕಾವೊ' ಮುಂತಾದ ಕೃತಿಗಳನ್ನು ಬಂಗಾಳಿಯಲ್ಲಿ ರಚಿಸಿದ್ದರು. ಅಷ್ಟೇ ಅಲ್ಲದೆ, 'Naked among wolves'ನ ಬಂಗಾಳಿ ಅನುವಾದವನ್ನೂ ಪ್ರಕಟಿಸಿದರು.

ಚಿಕ್ಕಂದಿನಿಂದಲೇ ವಿದ್ಯಾರ್ಥಿ ಸಂಘಟನೆಯ ನೇತೃತ್ವ ವಹಿಸಿದ್ದ ಗೀತಾ ಮುಖರ್ಜಿ ನಂತರದ ದಿನಗಳಲ್ಲೂ ಪಕ್ಷದ ನಾಯಕತ್ವದ ಪ್ರಮುಖ ಸ್ಥಾನಗಳನ್ನು ತಮ್ಮ ಸಾಮರ್ಥ್ಯದಿಂದ ಅಲಂಕರಿಸಿದರು. 1978ರಲ್ಲಿ ನ್ಯಾಷನಲ್ ಕೌನ್ಸಿಲ್‌ನ ಸದಸ್ಯೆಯಾಗಿ, 1981ರಲ್ಲಿ ನ್ಯಾಷನಲ್ ಎಕ್ಸಿಕ್ಯೂಟಿವ್‌ನ ಸದಸ್ಯೆಯಾಗಿ ಮತ್ತು 1998ರ ಪಾರ್ಟಿಕಾಂಗ್ರೆಸ್‌ನಲ್ಲಿ ನ್ಯಾಷನಲ್ ಕೌನ್ಸಿಲ್‌ನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರು. ಹಾಗೆಯೇ ಪಾರ್ಲಿಮೆಂಟಿನಲ್ಲಿ ಕಮ್ಯೂನಿಸ್ಟ್ ಪಕ್ಷದ ಉಪನಾಯಕಿಯೂ ಆಗಿದ್ದ ಗೀತಾ ಮುಖರ್ಜಿ ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮೆನ್‌ನ ಉಪಾಧ್ಯಕ್ಷೆಯೂ ಆಗಿದ್ದರು. ಪಕ್ಷದ ಈ ಕಾರ್ಯಚಟುವಟಿಕೆಗಳೇ ಅಲ್ಲದೆ ಅವರು ಮಹಿಳೆಯರ ಶ್ರೇಯೋಭಿವೃದ್ಧಿಗೆ ಅವರ ಹಕ್ಕುಗಳ ಸಮರ್ಥನೆಗೆ ಬಹುವಾಗಿ ಶ್ರಮಿಸಿದರು.

ಗೀತಾ ಮುಖರ್ಜಿಯವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಲು ಬಂದಿದ್ದ ಪ್ರಧಾನಿಗಳನ್ನು ಮಹಿಳಾ ಮುಖಂಡರು ಭೇಟಿ ಮಾಡಿ ಮಹಿಳಾ ಮೀಸಲಾತಿಯನ್ನು ಆದಷ್ಟು ಶೀಘ್ರವಾಗಿ ಜಾರಿಗೆ ಬರುವಂತೆ ಮಾಡುವುದೇ ಗೀತಾದಿಯವರಿಗೆ ದೇಶವು ತೋರಿಸಬಹುದಾದ ಗೌರವ ಎಂದು ಒತ್ತಾಯಿಸಿದರು. ಇದು ಕಾರ್ಯರೂಪಕ್ಕೆ ಬರುವಂತಾಗಲೆಂಬುದೇ ಎಲ್ಲರ ಸದಾಶಯ.

ಸರಳತೆ, ತತ್ವನಿಷ್ಠೆ, ಸಾಮಾಜಿಕ ಬದ್ಧತೆಯ ಮೌಲ್ಯಗಳೇ ಅಪರೂಪವಾಗುತ್ತಿರುವ ಇಂದಿನ ರಾಜಕೀಯ ಜಗತ್ತಿನಲ್ಲಿ ಈ ಮೌಲ್ಯಗಳನ್ನು ಅತ್ಯಂತ ಶ್ರೇಷ್ಠ ಮಟ್ಟದಲ್ಲಿ ತಮ್ಮಲ್ಲಿ ಮೂರ್ತೀಭವಿಸಿಕೊಂಡಿದ್ದ ಮಹಿಳಾ ನಾಯಕಿ ಗೀತಾ ಮುಖರ್ಜಿಯವರು ಬದುಕಿನ ಕೊನೆಯ ಗಳಿಗೆಯವರೆಗೂ ಬೌದ್ಧಿಕವಾಗಿ ಮತ್ತು ದೈಹಿಕವಾಗಿ ಕ್ರಿಯಾಶೀಲತೆಯನ್ನು ಮೆರೆದು ಮಹಿಳಾ ಚಳುವಳಿಗೆ ಉತ್ತಮ ಮಾದರಿಯಾಗಿದ್ದಾರೆ. ಅವರು ಹಚ್ಚಿಟ್ಟ ಸಮಾನತೆಯ ಹೋರಾಟದ ಹಣತೆ ಎಲ್ಲರಿಗೂ ದಾರಿದೀಪವಾಗಲಿದೆ.

— *ಎನ್. ಗಾಯತ್ರಿ*

ಮಹಿಳೆ ಮತ್ತು ಶೌಚಪುರಾಣ

- ನೇಮಿಚಂದ್ರ

ಫೆಬ್ರವರಿ ತಿಂಗಳಿನಲ್ಲಿ 'ಹೊಸ ಸಹಸ್ರಮಾನದಲ್ಲಿ ಉದ್ಯೋಗಸ್ಥ ಮಹಿಳೆಯರ ಮುಂದಿರುವ ಸವಾಲು'ಗಳನ್ನು ಕುರಿತು ಒಂದು ಸೆಮಿನಾರ್ ಏರ್ಪಟ್ಟಿತ್ತು. ವಿವಿಧ ಕ್ಷೇತ್ರದ ಮಹಿಳೆಯರು ಇಲ್ಲಿ ಸಂವಾದದಲ್ಲಿ ಭಾಗವಹಿಸಿದರು. ಶಾಲೆ ಕಾಲೇಜಿನ ಪ್ರಾಧ್ಯಾಪಕರು, ಬ್ಯಾಂಕಿನಲ್ಲಿ, ಸರಕಾರಿ, ಖಾಸಗಿ ಕಛೇರಿಗಳಲ್ಲಿ ದುಡಿಯುವವರು, ಕಾರ್ಖಾನೆ, ಆಸ್ಪತ್ರೆಗಳಲ್ಲಿ ಕೆಲಸದಲ್ಲಿರುವವರು, ಲಾಯರುಗಳು, ಇಂಜಿನಿಯರುಗಳು, ಸಮಾಜಸೇವಕರು ಎಲ್ಲರೂ ಇದ್ದ ಒಂದು ಸಭೆ ಇದು. ಹಲವು ಗಂಟೆಗಳ ಚರ್ಚೆ, ಸಂವಾದದ ಕೊನೆಯಲ್ಲಿ ಸಭೆ ಕೈಗೊಂಡ ನಿರ್ಣಯಗಳಲ್ಲಿ ಮೊದಲನೆಯದು - 'ಮಹಿಳೆಯರು ದುಡಿಯುವ ಸ್ಥಳದಲ್ಲಿ ಮಹಿಳೆಯರಿಗೆ ಶೌಚಾಲಯ ಗಳಿರಬೇಕು' ಎಂಬುದು.

ಹೇಳಿ ಕೇಳಿ ಮಹಿಳೆಯರು ಕೇಳಿದ್ದು, ಹಕ್ಕಿನಿಂದ ಬೇಡಿದ್ದು ಒಂದು ಶೌಚಾಲಯವೇ ಎಂದು ಅಚ್ಚರಿಪಡಬೇಡಿ. ನೀವು ಎಂದಾದರೂ ಗಮನಿಸಿದ್ದೀರಾ, ಬೆಂಗಳೂರು ತುಂಬಾ ಹಾದಿ ಬೀದಿಗಳಲ್ಲಿ ಅಲ್ಲಲ್ಲಿ ಗಂಡಸರ ಮೂತ್ರಾಲಯಗಳು ಕಾಣಸುತ್ತವೆ. (ಅವಿಲ್ಲದೆಯೂ ಪುರುಷರು ಒಂದು ಗೋಡೆ ಕಂಡರೂ ಸಾಕು ಹಗುರಾಗುತ್ತಾರೆ ಬಿಡಿ.) ಆದರೆ ನಮ್ಮ ಕಾರ್ಪೊರೇಷನ್, ಮಹಿಳೆಯರಿಗೂ ಜಲಬಾಧೆ ತೀರಿಸಿಕೊಳ್ಳುವ ಅಗತ್ಯವಿದೆ ಎಂಬುದನ್ನೇ ಮರೆತಂತಿದೆ. ಒಂದೇ ಒಂದು ಕಡೆ ಮಹಿಳೆಯರಿಗಾಗಿ ಒಂದು ಮೂತ್ರಾಲಯ ಕಾಣದು. ಇದೇನು ಕರ್ನಾಟಕಕ್ಕೆ ಸೀಮಿತವಾದ ವಿಚಿತ್ರವಲ್ಲ. ಬಾಂಬೆ, ದಿಲ್ಲಿ, ಹೈದರಾಬಾದ್, ಕೊಚಿನ್ ಅಂತಾ ಸದಾ ಅಲೆಯುವ ನನಗೆ, ಒಂದೊಂದು ಊರಿನಲ್ಲೂ ಹೊರಗೆ ಹೋದಾಗ, ಇಡೀ ದಿನ ತಿರುಗಬೇಕಾದಾಗ, ಯಾವ ಹೋಟಲಿಗೆ ಹೋಗುವುದು, ಕಾಫಿ ಕುಡಿಯುವ ನೆಪದಲ್ಲಿ ಟಾಯ್ಲೆಟ್ ಇದೆಯೆ ಎಂದು ಎಲ್ಲಿ ಹುಡುಕುವುದು ಎಂಬುದೇ ಚಿಂತೆಯಾಗಿರುತ್ತದೆ. ಕಾಫಿ ಕುಡಿದ ಹೋಟೆಲಿನಲ್ಲಿ ಶೌಚಾಲಯ ಇರುವುದೆಂಬ ಗ್ಯಾರಂಟಿ ಏನೂ ಇಲ್ಲ.

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಅಲಸೂರು ಸರೋವರದ ಬಳಿ ನಾನು, ನನ್ನ ಗೆಳತಿ ಅಡ್ಡಾಡುತ್ತಿದ್ದಾಗ, ಬಿಸಿಲಿನ ಬೇಗೆಗೆ ಚೆನ್ನಾಗಿ ಕಬ್ಬಿನ ಹಾಲು ಕುಡಿದ ನಮಗೆ ಜಲಬಾಧೆ. ಆದರೆ ಎಲ್ಲೂ ಶೌಚಾಲಯ ಕಾಣದು. ತಟ್ಟನೆ ಅಷ್ಟು ದೂರದಲ್ಲಿ ಅಷ್ಟೆತ್ತರ ಯುಟಿಲಿಟಿ ಬಿಲ್ಡಿಂಗ್ ಕಂಡಿತು. ಅಲ್ಲಿ ಶೌಚಾಲಯ ಇರುವುದು ತಿಳಿದಿತ್ತು. ಸರಿ ಯುಟಿಲಿಟಿ ಬಿಲ್ಡಿಂಗ್ ಅನ್ನು 'ಬೀಕನ್' ತರಹ ಹಿಡಿದು ನಡೆಯತೊಡಗಿದೆವು. ವಿದ್ಯಾರ್ಥಿ ದೆಸೆಯಲ್ಲಿದ್ದ ನಮ್ಮ ಬಳಿ ಆಗ ಆಟೋ ಹಿಡಿಯುವಷ್ಟು ಹಣವಿರಲಿಲ್ಲ. ಹೊಟ್ಟೆ ಹಿಡಿದುಕೊಂಡು ದಾಪು ಗಾಲು ಹಾಕಿ ಯುಟಿಲಿಟಿ ಬಿಲ್ಡಿಂಗ್ ತಲುಪುವವರೆಗೆ ನಮ್ಮ ಬಾಧೆ ಹೇಳ ತೀರದು. ಇಂದಿಗೂ ಬೆಂಗಳೂರಿನ ಸ್ಥಿತಿಯೇನೂ ಹೆಚ್ಚು ಬದಲಾಗಿಲ್ಲ. ಆದರೆ ಒಂದೂವರೆ ದಶಕದಿಂದ ಬೆಂಗಳೂರಿನಲ್ಲಿ ನೆಲೆಸಿ, ಇಲ್ಲಿಯ ಮೂಲೆ ಮೂಲೆಗಳ ಪರಿಚಯವಾದ ಕಾರಣ, ಯಾವ ಕಛೇರಿಯಲ್ಲಿ, ಯಾವ ಹೋಟಲಿನಲ್ಲಿ, ಯಾವ ಸಾರ್ವಜನಿಕ ಕಟ್ಟಡದಲ್ಲಿ, ಗ್ರಂಥಾಲಯದಲ್ಲಿ ಟಾಯ್ಲೆಟ್ ಇದೆ ಗುರುತು ಮಾಡಿಕೊಂಡಿದ್ದೇವೆ. ಆದರೆ ಅಪ್ಪಟ ಅಪರಿಚಿತ ಊರಿನಲ್ಲಿ ಏನು ಮಾಡುತ್ತೀರಿ ? ಮೊನ್ನೆ ಹೈದರಾಬಾದಿಗೆ ಹೋದದ್ದು, ಇಡೀ ದಿನ ಅಲೆದಾಡುತ್ತಿದ್ದಾಗ ಕಾಡಿತು ಜಲಬಾಧೆ. ಕಡೆಗೆ ರಸ್ತೆಯಲ್ಲಿ ಒಬ್ಬ ಮಹಿಳೆಯನ್ನು ನಿಲ್ಲಿಸಿ, 'ಎಲ್ಲಾದರೂ ಟಾಯ್ಲೆಟ್ ಇದೆಯಾ?' ಮಿಕ ಮಿಕ ನನ್ನನ್ನೇ ನೋಡಿದಳು. 'ಇಲ್ಲೆಲ್ಲೂ ಸುಲಬ್ ಶೌಚಾಲಯ ಇಲ್ಲವೆ?' ಆಸೆಯಿಂದ ಕೇಳಿದೆ, 'ಚಾರ್‌ಮಿನಾರ್ ಬಸ್ ನಿಲ್ದಾಣ'ದಲ್ಲಿದೆ ಎಂದು ತಿಳಿದು ಬಂತು. ನಾನಿದ್ದದ್ದು ಎಲ್ಲೋ, ಚಾರಮಿನಾರ್ ಯಾವ ದಿಕ್ಕಿಗೋ ತಲೆ ಕೆಡಿಸಿಕೊಳ್ಳದೆ ಒಂದು ಆಟೋ ಹತ್ತಿ 'ಚಾರ್‌ಮಿನಾರ್' ಎಂದು ಕೂಗಿದೆ. ಬಸ್ ನಿಲ್ದಾಣ ತಲುಪಿ ಒಂದು ರೂಪಾಯಿ ಕೊಟ್ಟು ಕತ್ತಲೆಯ ಕೊಳಕು ಕಕ್ಕಸ್ಸಿನ ಒಳಕ್ಕೆ ಹೊಕ್ಕು ನೋಡಿದರೆ ಕಾಣುವುದೇನು, ಯಾರೋ ಗಂಡಸು, ಹೆಂಗಸರ ಶೌಚಾಲಯದಲ್ಲಿ ಕಾಫಿ ಕಪ್ ತೊಳೆಯುತ್ತಾ ಕುಳಿತಿದ್ದಾನೆ !

ನನ್ನ ಕೆಲಸ ನನ್ನನ್ನು ಬಹಳಷ್ಟು ಬಾರಿ ನೌಕಾಸೇನೆಗೆ ಕರೆದೊಯ್ಯುತ್ತದೆ. ಹತ್ತು ವರ್ಷಗಳ ಹಿಂದೆ ಸೇನೆಯ ಯಾವ ಸ್ಥಳಗಳಲ್ಲೂ ಮಹಿಳೆಯರ ಶೌಚಾಲಯಗಳಿರಲಿಲ್ಲ. ಮಹಿಳೆಯರಿಗೆ ನೌಕಾಸೇನೆಗೆ ಪ್ರವೇಶವೇ ಇಲ್ಲದ ಮೇಲೆ ಅವರಿಗೆ ಶೌಚಾಲಯಗಳು ಎಲ್ಲಿಂದ ಬರಬೇಕು. ಆದರೆ ಮಿಲಿಟರಿಯ ಕೆಲಸದ ಮೇಲೆ ಅಲ್ಲಿ ಹೋದ ನನಗೆ ನೌಕಾಪಡೆಯ ಪ್ರದೇಶಗಳಿಗೆ ಪ್ರವೇಶ ಸಿಕ್ಕಿತ್ತು. ಮೊದಮೊದಲು ಬೆಳಗ್ಗೆ ಹೋಟಲಿನಲ್ಲೆ ಎಲ್ಲಾ ಮುಗಿಸಿಕೊಂಡು ಹೊರಟು, ರಾತ್ರಿ ಕೆಲಸ ಮುಗಿಸಿ ಹಿಂತಿರುಗುವವರೆಗೂ ತಡೆದುಕೊಳ್ಳುತ್ತಿದ್ದೆ. ಆದರೆ ಸ್ವಲ್ಪವೇ ಸಮಯದಲ್ಲಿ ಸಂಕೋಚ ಬಿಟ್ಟೆ. ನನ್ನೊಡನಿದ್ದ ಪುರುಷರಿಗೆ 'ನಿಮ್ಮ ಶೌಚಾಲಯವನ್ನು ಬಳಸಬೇಕು, ಸ್ವಲ್ಪ ಇಲ್ಲಿ ಹೊರಗೆ ಕಾಯುವಿರಾ?' ಎಂದು ಕೇಳಿ, ಅವರ ಶೌಚಾಲಯಗಳನ್ನೇ ಬಳಸತೊಡಗಿದೆ. ಕ್ಷಣ ಗಲಿಬಿಲಿಗೊಂಡರೂ ಮರುಕ್ಷಣ ಪರಿಸ್ಥಿತಿ ಅರ್ಥ ಮಾಡಿಕೊಂಡು ಮೊದಲು ಅವರು ಒಳ ಹೋಗಿ ಚೆಕ್ ಮಾಡಿ ನನಗೆ ಅವಕಾಶ ಮಾಡಿಕೊಡುತ್ತಿದ್ದರು. ಪುಣ್ಯಕ್ಕೆ 1992ರಲ್ಲಿ ನೌಕಾಪಡೆ ಮಹಿಳೆಯರಿಗೆ ಬಾಗಿಲು ತೆರೆಯಿತು. ಇಂದು ನೆಲದ ಮೇಲಿನ ನೌಕಾಪಡೆಯ ಕಾರ್ಯಕ್ಷೇತ್ರಗಳಲ್ಲಿ ಮಹಿಳೆಯರಿಗೆ ಶೌಚಾಲಯಗಳಿವೆ. ಆದರೆ ಸೇನೆಗೆ ಪ್ರವೇಶ ಕೊಟ್ಟರು, ಇನ್ನೂ ಈ ಮಹಿಳೆಯರಿಗೆ

ಯುದ್ಧದ ಹಡಗುಗಳಲ್ಲಿ ಪ್ರವೇಶವಿಲ್ಲ. ಹಾಗಾಗಿ ಯುದ್ಧದ ಹಡಗಿನ ಮೇಲೆ ನನಗೆ ಕೆಲಸವಿದ್ದಾಗೆಲ್ಲ ಮತ್ತೆ ಪುರುಷರ ಶೌಚಾಲಯ ಬಳಸುವುದು ತಪ್ಪಿಲ್ಲ !

ಯುದ್ಧದ ಹಡಗಿನಲ್ಲಿ ಮಹಿಳಾ ಶೌಚಾಲಯಗಳಿರಲಿ, ಹೆಂಗಸರು ಕೆಲಸ ಮಾಡುವ ಶಾಲೆ, ಕಾಲೇಜು, ಬ್ಯಾಂಕ್, ಕಛೇರಿ, ಕಾರ್ಖಾನೆಗಳಲ್ಲೂ ಮಹಿಳೆಯರಿಗೆ ಸರಿಯಾದ ಶೌಚಾಲಯವಿಲ್ಲ. ಶೌಚಾಲಯವಿದ್ದರೆ ಅಲ್ಲಿ ನೀರಿಲ್ಲ ಎಂದು ನಿಮಗೆ ಗೊತ್ತೆ ? ನಾನು ಕೆಲಸ ಮಾಡುವುದು ಒಂದು ಕಾರ್ಖಾನೆಯಲ್ಲಿ. ಹದಿನಾಲ್ಕು ವರ್ಷಗಳ ಹಿಂದೆ ನಾನಿಲ್ಲಿ ಸೇರಿದಾಗ ನಮ್ಮ ಡಿಸೈನ್ ವಿಭಾಗದಲ್ಲಿದ್ದ ಮಹಿಳೆಯರ ಸಂಖ್ಯೆ ಬೆರಳೆಣಿಕೆಯಷ್ಟು. ಮೂರು ಮಹಡಿಯ ಕಟ್ಟಡದಲ್ಲಿ ಮಹಿಳೆಯರಿಗಾಗಿ ಇದ್ದ ಶೌಚಾಲಯ ಒಂದೇ ಒಂದು. ಅದು ಆ ಕಾಲಕ್ಕೆ ಸಾಕಿತ್ತು. ಪುರುಷರಿಗೆ ಪ್ರತಿಯೊಂದು ಮಹಡಿಯಲ್ಲು ಶೌಚಾಲಯಗಳಿದ್ದವು. ಇಡೀ ಕಟ್ಟಡದಲ್ಲಿ ಪುರುಷರಿಗೆ ಒಟ್ಟು ಹದಿನೈದು ಶೌಚಾಲಯಗಳೂ, ಹದಿನೈದು ಮೂತ್ರಾಲಯಗಳೂ ಇದ್ದವು. ಇಂದು ಮಹಿಳಾ ಇಂಜಿನಿಯರುಗಳು ಬಹಳಷ್ಟು ಸಂಖ್ಯೆಯಲ್ಲಿ ಸೇರಿರುವ ಸಮಯದಲ್ಲಿ, ಪ್ರತಿ ಬಾರಿ ಶೌಚಾಲಯಕ್ಕೆ ಹೋದರೆ ಕ್ಯೂ ನಿಲ್ಲುವ ಪರಿಸ್ಥಿತಿ. ಮೀಟಿಂಗ್‌ಗೆ ಹೊತ್ತಾಯ್ತು ಎಂದು ಅವಸರದಲ್ಲಿ ಕಾಯಲು ಸಾಧ್ಯವಿಲ್ಲದೆ ಓಡಿ, "ಗಂಟೆಗಟ್ಟಲೆ ಪ್ರಕೃತಿ ಕರೆಗೆ ಕಿವುಡಾದದ್ದುಂಟು. ಆದರೆ ಶೌಚಾಲಯದ ಬಗ್ಗೆ ಮೇಲಧಿಕಾರಿಗಳಿಗೆ ಹೇಳಲು, ಮಾತನಾಡಲು ಮಹಿಳೆಯರಿಗೆ ಸಂಕೋಚ, ಮುಜುಗರ. ಜೊತೆಗೆ ಹೆಂಗಸರು ಗೋಳು ಹೇಳಿಕೊಳ್ಳುತ್ತಾರೆ ಎಂದು ಬಿಡುತ್ತಾರೇನೋ ಎಂಬ ಭಯ. ನಾವು ಕೇಳಿದ ತಕ್ಷಣ ನಮಗಾಗಿ ಹೊಸ ಶೌಚಾಲಯ ಕಟ್ಟಿಕೊಡುತ್ತಾರಾ ಎಂಬ ಪ್ರಶ್ನೆ. ಅಂತೂ ಹೆಂಗಸರು ತಮ್ಮ ಸಮಸ್ಯೆಗಳನ್ನು ತಮ್ಮೊಳಗೇ ಅಡಗಿಸಿಕೊಂಡು ಅನುಭವಿಸುತ್ತಿದ್ದರು. ಆದರೆ ಪರಿಸ್ಥಿತಿಯ ಬಿಸಿ ನಮಗೇ ಹೆಚ್ಚು ತಗುಲಿದಾಗ, ನಾವು ಕೆಲವು ಮಹಿಳೆಯರು ಸೀದಾ ಜನರಲ್ ಮ್ಯಾನೇಜರ್ ಕೋಣೆಗೆ ಹೋದೆವು. ಸಾವಧಾನವಾಗಿ ನಮ್ಮ ಪರಿಸ್ಥಿತಿಯನ್ನು ಸಂಕೋಚವಿಲ್ಲದೆ ವಿವರಿಸಿದೆವು. ಪುರುಷರು ಮೂರು ಶೌಚಾಲಯಗಳನ್ನು ಮಹಿಳೆಯರಿಗೆ ಬಿಟ್ಟುಕೊಡಲು ಕೇಳಿದೆವು. ನಮ್ಮ ಹಿರಿಯ ಅಧಿಕಾರಿಗಳಿಗೆ ನಮ್ಮ ಪರಿಸ್ಥಿತಿಯೇ ತಿಳಿದಿರಲಿಲ್ಲ. ತಿಳಿಸಿದರೆ ತಾನೆ ತಿಳಿಯುವುದು. ನಾವು ಕೇಳಿಕೊಂಡೊಡನೆ ಪುರುಷರ ಮೂರು ಶೌಚಾಲಯಗಳನ್ನು ಪರಿವರ್ತಿಸಿ ನಮಗೆ ಕೊಟ್ಟರು. ಆದರೆ ಎಲ್ಲ ಉದ್ಯೋಗಸ್ಥ ಮಹಿಳೆಯರ ಶೌಚಾಲಯದ ಸಮಸ್ಯೆ ಇಷ್ಟು ಸುಲಭವಾಗಿ ಪರಿಹಾರವಾಗುವುದಿಲ್ಲ.

ಈ ಸಭೆಗೆ ಬಂದ ಅನೇಕ ಮಹಿಳೆಯರು ತಮ್ಮ ಕಷ್ಟಗಳನ್ನು ಹಂಚಿಕೊಂಡರು. ಪ್ರಸಿದ್ಧ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಾಲ್ಕು ಮಹಡಿಯ ಕಟ್ಟಡದಲ್ಲಿ ಮಹಿಳೆಯರಿಗೆ ಇರುವುದು ಒಂದೇ ಒಂದು ಶೌಚಾಲಯ. ಅದೂ ನೆಲಮಹಡಿಯಲ್ಲಿ. ನಾಲ್ಕನೇ ಮಹಡಿಯಲ್ಲಿ ತರಗತಿ ಇರುವ ಹುಡುಗಿಯರು ನಾಲ್ಕು ಮಹಡಿ ಇಳಿದು ಹತ್ತಿ ಮಾಡಬೇಕು. ಹೆಣ್ಣು ಮಕ್ಕಳ ಅನೇಕ ಶಾಲೆ, ಕಾಲೇಜುಗಳಲ್ಲಿ ಪ್ರಾಧ್ಯಾಪಕರಿಗೂ ಶೌಚಾಲಯಗಳೇ ಇಲ್ಲ. ನನ್ನ ತವರು ಮನೆಯ ಎದುರುಗಡೆ ಒಬ್ಬರು ಮೇಡಂ ಇದ್ದಾರೆ. ಒಮ್ಮೆ ಅವರು ಮೂತ್ರಪಿಂಡದ ಕಲ್ಲುಗಳ ಬಾಧೆಯಿಂದ ನರಳುತ್ತಿದ್ದರು. ಸಾಮಾನ್ಯವಾಗಿ ಗಂಡಸರಲ್ಲಿ ಮೂತ್ರಪಿಂಡದ ಕಲ್ಲುಗಳು ಹೆಚ್ಚು ಕಾಣಿಸಿಕೊಳ್ಳುವುದನ್ನು ನೋಡಿದ್ದೆ. 'ನಿಮಗೆ ಹೇಗೆ ಬಂತು?' ಅಂತಾ ಕೇಳಿದೆ. ಆಕೆ ಹೇಳಿದ್ದರು. ಅವರ ಶಾಲೆಯಲ್ಲಿ ಮಹಿಳೆಯರಿಗೆ ಶೌಚಾಲಯವಿಲ್ಲ. ಹಾಗಾಗಿ ಬೆಳಗ್ಗೆ ಮನೆಯಿಂದ ಹೊರಟ ಮೇಲೆ ಮತ್ತೆ ಸಂಜೆ ಹಿಂತಿರುಗಿ ಬರುವವರೆಗೂ ಜಲಬಾಧೆಯನ್ನು ತಡೆದುಕೊಳ್ಳದೆ ಬೇರೆ ದಾರಿ ಇಲ್ಲ. ನೀರು ಕುಡಿದರೆ ಶೌಚಾಲಯಕ್ಕೆ ಹೋಗಬೇಕಾಗುತ್ತದೆ ಎಂದು ಈ ಮಹಿಳೆ ದಿನವೆಲ್ಲ ನೀರು ಕುಡಿಯುವುದನ್ನೇ ಬಿಟ್ಟಿದ್ದರು ! ಒಂದು ದಿನ ಹೆರಿಗೆ ನೋವನ್ನೂ ಮೀರಿಸಿದ ನೋವಿನಿಂದ ಬೊಬ್ಬೆ ಇಟ್ಟು ವೈದ್ಯರಲ್ಲಿ ಪರಿಶೀಲಿಸಿದಾಗ ಮೂತ್ರಪಿಂಡದ ಕಲ್ಲಗಳಿರುವುದು ತಿಳಿದು ಬಂತು. ಅರ್ಧ ಅಂಗುಲದಷ್ಟು ಕಲ್ಲನ್ನು ಶಸ್ತ್ರಕ್ರಿಯೆಯಿಂದ ತೆಗೆದು ಹಾಕಿದರು. ಚೆನ್ನಾಗಿ ನೀರು ಕುಡಿಯುವಂತೆ, ಮೂತ್ರ ಬಂದಾಗ ತಡೆ ಹಿಡಿಯದೆ ಹೋಗುವಂತೆ ಸಲಹೆ ಕೊಟ್ಟು ಕಳುಹಿಸಿದರು.

ನಗರಗಳಲ್ಲಿರುವ ಮಹಿಳೆಯರದೇ ಈ ಸ್ಥಿತಿಯಾದರೆ ಇನ್ನೂ ಹಳ್ಳಿಗಾಡಿನ ಮಹಿಳೆಯರ ಪಾಡನ್ನು ಯಾರು ಕೇಳಬೇಕು. ಹಳ್ಳಿ ಹೆಂಗಸರು ಬೆಳಗ್ಗೆ ಬೆಳಕು ಮೂಡುವ ಮೊದಲೆ ಹುಳು ಹುಪ್ಪಟೆ ಹಾವು ಚೇಳು ಏನಿದೆ ಎಂದು ಕೂಡಾ ಕಾಣದೆ ಕತ್ತಲಲ್ಲೆ ಹೊರಗೆ ಹೋಗಿ ತಮ್ಮ ಕೆಲಸವನ್ನು ಮುಗಿಸಿಕೊಂಡು ಬರಬೇಕು. ರಾಜಾಸ್ತಾನದ ಬತೇರಿಗ್ರಾಮದ ಸಾಥಿನ್ ಭಾವ್ರಿದೇವಿ ತನಗೆ ನೀರ್ಜಾ ಭಾನೋಟ್ ಪ್ರಶಸ್ತಿ ಬಂದಾಗ, ಹೇಳಿದ ಮೊದಲ ಮಾತುಗಳೇನು ಗೊತ್ತೆ - 'ಈ ಹಣದ ಒಂದು ಭಾಗವನ್ನು ನಾ ಮೊದಲು ನನ್ನ ಹಳ್ಳಿಯ ಹೆಣ್ಣು ಮಕ್ಕಳಿಗೆ ಶೌಚಾಲಯ ಕಟ್ಟಿಸಲು ಬಳಸುತ್ತೇನೆ'. ಗ್ರಾಮ ಪಂಚಾಯಿತಿಗೆ ಚುನಾಯಿತರಾಗಿ ಬಂದ ಅನೇಕ ಮಹಿಳೆಯರು ಮೊದಲು ಆದ್ಯತೆ ಕೊಟ್ಟದ್ದು ಹೆಣ್ಣು ಮಕ್ಕಳಿಗೊಂದು ಶೌಚಾಲಯ ಬೇಕೆಂದು. ಮಹಿಳೆಯ ಕಷ್ಟ ಮಹಿಳೆಯರಿಗೆ ತಾನೆ ಗೊತ್ತು.

ಈ ಎಲ್ಲ ಹಿನ್ನೆಲೆಯಲ್ಲಿ ಇಂದು ಉದ್ಯೋಗಸ್ಥ ಮಹಿಳೆಯರ ಒಂದು ಮಹತ್ವದ ಸಮಾರಂಭದಲ್ಲಿ ಮಹಿಳೆಯರೆಲ್ಲ 'ಶೌಚಾಲಯ'ಕ್ಕೆ ಮೊದಲ ಪ್ರಾಮುಖ್ಯ ಕೊಟ್ಟದ್ದು ನಿಜಕ್ಕೂ ಸಂತೋಷದ ಸುದ್ದಿ. ಮಹಿಳೆಯರು ಸವಲತ್ತುಗಳನ್ನು ಕೇಳುತ್ತಿಲ್ಲ, ಮೂಲಭೂತ ಅಗತ್ಯಗಳನ್ನು ಹಕ್ಕಿನಿಂದ ಕೇಳುತ್ತಿದ್ದಾರೆ, ಮಾನವೀಯ ಹಕ್ಕುಗಳನ್ನು ಕೇಳುತ್ತಿದ್ದಾರೆ. ಮಹಿಳೆಯರು ಸಂಕೋಚ ಬಿಟ್ಟು ತಮ್ಮ ಇಂಥಾ ಸಮಸ್ಯೆಗಳನ್ನು ತಮ್ಮ ಮೇಲಧಿಕಾರಿಗಳ ಎದುರು ಮಂಡಿಸಬೇಕು. ತಮ್ಮ ಮೂಲಭೂತ ಹಕ್ಕುಗಳಿಗೆ ಹೋರಾಡಬೇಕು. ❑

ಅಂತರರಾಷ್ಟ್ರೀಯ ಮಹಿಳಾ ದಿನ - ಒಂದು ನೋಟ

- ಕಲ್ಪನಾ ಶರ್ಮ

ಅಂತರರಾಷ್ಟ್ರೀಯ ಮಹಿಳಾ ವರ್ಷವಾಗಿ 25 ವರ್ಷಗಳೇ ಕಳೆದಿವೆ. ಅಂದಿನಿಂದ ಇಂದಿನವರೆಗೆ ಹಲವಾರು ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನಗಳು ನಡೆದಿವೆ. ಮಹಿಳೆಯರ ಸ್ಥಿತಿಗತಿಗಳನ್ನು, ಸಮಸ್ಯೆಗಳನ್ನು ಕುರಿತು ಚರ್ಚಿಸಲಾಗಿದೆ. ವಿಶ್ವಮಟ್ಟದ ಈ ವಿಷಯ ಒಂದೊಂದು ದೇಶದಲ್ಲಿ ಒಂದೊಂದು ರೀತಿ ಧ್ವನಿಸಿದೆ. ನಮ್ಮ ನಿಕಟ ಪರಿಸರದಲ್ಲೇ ಅದರ ಆಳ ತಿಳಿಯಬೇಕೆಂಬ ಉದ್ದೇಶದಿಂದ ಕಾಲೇಜು ಹುಡುಗಿಯೊಬ್ಬಳನ್ನು 'ಮಾರ್ಚ್ 8ರ ಮಹತ್ವವೇನು ಗೊತ್ತೆ' ಎಂದು ಕೇಳಿದೆ. ಸ್ವಲ್ಪ ಯೋಚಿಸಿ (ಅಥವಾ ಯೋಚಿಸಿದಂತೆ ಮಾಡಿ) ಕೈಚೆಲ್ಲಿ ಕತ್ತನ್ನಾಡಿಸುತ್ತ 'ಗೊತ್ತಿಲ್ಲ' ಎಂದಳು. ಇಷ್ಟೇ ಏನು ಮಾರ್ಚ್ 8ರ ಮಹತ್ವ ?

1975ರಲ್ಲಿ ಮೆಕ್ಸಿಕೋ ನಗರದಲ್ಲಿ ಮಹಿಳೆಯರ ಬಗ್ಗೆ ಸಂಯುಕ್ತ ರಾಷ್ಟ್ರಗಳ ಸಮ್ಮೇಳನ ನಡೆಯಿತು. ಅಂತರರಾಷ್ಟ್ರೀಯ ಮಹಿಳಾ ವರ್ಷದ ಘೋಷಣೆ ಆದದ್ದೂ ಆಗಲೇ. ಭಾರತಕ್ಕೂ ಅದೊಂದು ಮಹತ್ವದ ವರ್ಷ. ಅದೇ ವರ್ಷದಲ್ಲೇ ಭಾರತೀಯ ಮಹಿಳೆಯರ ಸ್ಥಿತಿಗತಿಗಳ ಬಗ್ಗೆಯೂ ಒಂದು ಸಮಗ್ರ ವರದಿ ಹೊರಬಂದಿತು. ಭಾರತೀಯ ಮಹಿಳೆಯರ ಸ್ಥಿತಿಗತಿ ಎಲ್ಲರಿಗೂ ಗೊತ್ತಿರುವುದೇ. ಆದರೆ ಈ ವರದಿ, ಮುದ್ರಣ ಕಂಡ ಮೇಲೆ ಪುರುಷರು ಮಹಿಳೆಯರಾದಿಯಾಗಿ ಎಲ್ಲರೂ ಯೋಚಿಸುವಂತೆ ಮಾಡಿತು.

ಸ್ವಾತಂತ್ರ್ಯ ಲಭಿಸಿದ 25 ವರ್ಷಗಳ ನಂತರವೂ ಭಾರತೀಯ ಮಹಿಳೆಯರ ಹೀನಾಯ ಸ್ಥಿತಿಯ ಕುರಿತು ಬೆಳಕಿಗೆ ಬಂದ ಅಂಕಿ ಅಂಶಗಳು ಒಂದು ರೀತಿ ಗಾಬರಿಯನ್ನೇ ಉಂಟುಮಾಡಿದವು. ಮಹಿಳೆಯರನ್ನು ಕುರಿತಂತೆ ಕಾನೂನುಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲು, ಮಹಿಳಾಪರ ಆಂದೋಲನಗಳನ್ನು ಹಮ್ಮಿಕೊಳ್ಳಲು ಈ ವರದಿ ಕಾರಣವಾಯಿತು. ಅದುವರೆವಿಗೂ ಮಹಿಳೆಯರ ಅವಶ್ಯಕತೆಗಳಿಗೆ ಸ್ಪಂದಿಸದಿದ್ದ ಅಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸಿ, ತಿದ್ದಿ ತೀಡಲು ಸಹಾಯಕವಾಯಿತು. ಈ ವರದಿ ಪ್ರಕಟವಾದ ಮೇಲೆ ಕ್ರಮೇಣ ಭಾರತದಲ್ಲೂ ಮಹಿಳಾ ಆಂದೋಳನವು ಚುರುಕಾಗತೊಡಗಿತು; ತೀಕ್ಷ್ಣತೆ ಪಡೆದುಕೊಳ್ಳತೊಡಗಿತು. ವರದಕ್ಷಿಣೆ ವಿರುದ್ಧ ಹೋರಾಟ ಮತ್ತು ಅತ್ಯಾಚಾರ ಹಾಗೂ ಆಸ್ತಿ ಹಕ್ಕಿನ ಕಾನೂನುಗಳಲ್ಲಿ ಸೂಕ್ತ ಬದಲಾವಣೆ ಮುಂತಾದ ವಿಷಯಗಳಿಗೆ ಒತ್ತು ಕೊಡುವುದರ ಮೂಲಕ ಈ ಆಂದೋಳನ ರಾಷ್ಟ್ರೀಯ ಮಟ್ಟದಲ್ಲಿ ಎಲ್ಲರ ಗಮನ ಸೆಳೆಯಿತು.

ಮಹಿಳೆಯರ ಸ್ಥಿತಿಗತಿಗಳ ಕುರಿತಾದ 1975ರ ವರದಿ ತಂತಾನೇ ಜನರ ಗಮನವನ್ನೇನೂ ಖಂಡಿತ ಸೆಳೆಯುತ್ತಿರಲಿಲ್ಲ. ಆ ವರದಿಗೆ ಪೂರಕವಾಗಿ ಮಹಿಳಾ ಚಳುವಳಿ ಸಕ್ರಿಯವಾಗುತ್ತ ಬಂದದ್ದೇ ಅದು ಕೇಂದ್ರಬಿಂದುವಾಗಲು ಕಾರಣವಾಯಿತು. ಮಾರ್ಚ್ 8ನ್ನು ಮಹಿಳಾ ದಿನವೆಂದು ಘೋಷಿಸಿದ್ದು ಕೂಡ ಒಂದು ಮಹತ್ವವನ್ನು ಉಂಟು ಮಾಡಿತು.

ಮಾರ್ಚ್ 8 ರಂದು ಮಹಿಳೆಯರ ಬಗ್ಗೆ ವಿಚಾರ ಸಂಕಿರಣಗಳು ನಡೆಯುತ್ತವೆ; ಸಭೆಗಳು ಜರುಗುತ್ತವೆ. ಹೊಸ ಹೊಸ ಯೋಜನೆಗಳು ರೂಪುಗೊಳ್ಳುತ್ತವೆ. ಮೆರವಣಿಗೆ, ಪ್ರದರ್ಶನಗಳು ನಡೆಯುತ್ತವೆ. ಆದರೆ ಇವೆಲ್ಲಾ ನಗರ ಪ್ರದೇಶಗಳಿಗಷ್ಟೇ ಸೀಮಿತವಾಗಿರುವುದು ಮಾತ್ರ ವಿಷಾದದ ಸಂಗತಿಯೇ.

ಭಾರತದಲ್ಲಿ ಮಹಿಳಾ ದಿನಕ್ಕೆ ಇಂಬುಕೊಡುವಂಥ ಘಟನೆಗಳ್ಯಾವುವೂ ಹಿಂದೆ ನಡೆದಿದ್ದಿಲ್ಲ. ಮಹಿಳಾ ದಿನದ ಪರಿಕಲ್ಪನೆ ಮೂಡಿಬಂದದ್ದು ಪಾಶ್ಚಾತ್ಯ ದೇಶದಲ್ಲೇ. 20ನೆಯ ಶತಮಾನದ ಆರಂಭದಲ್ಲಿ ಅಲ್ಲಿನ ಕೈಗಾರಿಕಾ ರಂಗದ ಮಹಿಳಾ ಉದ್ಯೋಗಿಗಳು ಸಮಾನ ಹಕ್ಕು ಮತ್ತು ವೇತನಕ್ಕಾಗಿ ತಮ್ಮ ಬೇಡಿಕೆಯನ್ನು ಮುಂದಿಟ್ಟರು. ಸ್ವಾಭಾವಿಕವಾಗಿಯೇ ಆಡಳಿತ ಮಂಡಳಿಗೆ ಇದು ರುಚಿಸಲಿಲ್ಲ. ಕಾರ್ಮಿಕ ವರ್ಗದಲ್ಲಿ ಒಗ್ಗಟ್ಟು ಇರಬೇಕಾದ ಅವಶ್ಯಕತೆ ಇರುವಾಗ ಈ ಪ್ರತ್ಯೇಕ ಬೇಡಿಕೆ ಟ್ರೇಡ್ ಯೂನಿಯನ್‌ಗಳಿಗೂ ಕಹಿಯಾಯಿತು. ಒಟ್ಟಿನಲ್ಲಿ ಇದು ಅಸಂಗತವಾದದ್ದು, ಅನುಚಿತವಾದದ್ದು ಎಂದು ಎಲ್ಲರೂ ಅಭಿಪ್ರಾಯಪಟ್ಟರು. ಈ ಬೇಡಿಕೆಯನ್ನು ವಿರೋಧಿಸಿದರು. ಇದರ ಫಲಿತಾಂಶವಾಗಿ, 1903ರಲ್ಲಿ ಅಮೆರಿಕೆಯಲ್ಲಿ ಮಹಿಳಾ ಟ್ರೇಡ್ ಯೂನಿಯನ್ ಲೀಗ್ ಸ್ಥಾಪನೆಯಾಯಿತು. ಇದರ ಮುಖ್ಯ ಉದ್ದೇಶ - ರಾಜಕೀಯ ಹಾಗೂ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಮಹಿಳೆಯರನ್ನು ಸಂಘಟಿಸುವುದು. ಈ ಸಂಘಟನೆ 1908ರ ಫೆಬ್ರವರಿ ತಿಂಗಳ ಕೊನೆಯ ಭಾನುವಾರವನ್ನು ಮಹಿಳಾ ದಿನವನ್ನಾಗಿ ಆಚರಿಸಿತು. ಆಮೇಲೆ ಎರಡು ವರ್ಷಗಳ ಬಳಿಕ ಕೋಪೆನ್ ಹೆಗೆನ್‌ನಲ್ಲಿ ಸಮಾಜವಾದಿ ಮಹಿಳೆಯರ ಎರಡನೆಯ ಅಂತರರಾಷ್ಟ್ರೀಯ ಸಮ್ಮೇಳನ ನಡೆಯಿತು. ಈ ಸಂದರ್ಭದಲ್ಲೇ ಅಂತರ ರಾಷ್ಟ್ರೀಯ ಮಹಿಳಾದಿನದ ಪರಿಕಲ್ಪನೆಯನ್ನೂ ಪ್ರಸ್ತಾಪಿಸಲಾಯಿತು. ಇದು ಬಹಳ ಉತ್ಸಾಹದಿಂದ ಅಂಗೀಕೃತವೂ ಆಯಿತು.

ಸಂಯುಕ್ತ ರಾಷ್ಟ್ರಗಳು ಮಾರ್ಚ್ 8ನ್ನು ಅಂತರ ರಾಷ್ಟ್ರೀಯ ಮಹಿಳಾ ದಿನವೆಂದು ಒಪ್ಪಿಕೊಂಡು, 1975ನ್ನು ಮಹಿಳಾ ವರ್ಷವೆಂದು ಘೋಷಿಸುವ ಹೊತ್ತಿಗೆ ವಿಶ್ವದ ಬೇರೆ ರಾಷ್ಟ್ರಗಳಲ್ಲಿಯೂ ಇದು ಮಾರ್ದನಿಸಿತು. ಉದಾಹರಣೆಗೆ ಕ್ಯೂಬಾ ಸರ್ಕಾರ ಇದನ್ನೊಂದು ಪ್ರಮುಖ ದಿನವನ್ನಾಗಿ ಗುರುತಿಸಿತಲ್ಲದೆ, ಅದೇ ವರ್ಷದಲ್ಲೇ ಸಂಪ್ರದಾಯವಾದಿ ಪುರುಷರ ಧೋರಣೆ-ಆಚಾರ-ವಿಚಾರಗಳ ವಿರುದ್ಧ ಒಂದು ಆಂದೋಳನವನ್ನೇ ಆರಂಭಿಸಿತು. ಮನೆಗೆಲಸ ಮಹಿಳೆ-ಪುರುಷ ಇಬ್ಬರಿಗೂ ಸೇರಿದ ಜವಾಬ್ದಾರಿ ಎನ್ನುವ ವಿವಾಹ ಸಂಹಿತೆಯನ್ನು ಹೊಸತಾಗಿ ರೂಪಿಸಿತು. ಅತ್ತ ಬೇರೆ ದೇಶಗಳೂ ಮಹಿಳಾಪರ ಯೋಜನೆಗಳನ್ನು ರೂಪಿಸಲು ಮಾರ್ಚ್ 8ರ ಸಂದರ್ಭವನ್ನೇ ಆರಿಸಿಕೊಳ್ಳತೊಡಗಿದವು.

ಮಹಿಳಾ ದಿನಕ್ಕೆ ವಿಶ್ವಮನ್ನಣೆ ದೊರೆತ ಮೇಲೆ ಬೇರೆ ರಾಷ್ಟ್ರಗಳಲ್ಲೂ ಮಾರ್ಚ್ 8ಕ್ಕೆ ಒಂದು ಮಾನ್ಯತೆ ಸಿಕ್ಕಿತು. ಈಗಲೂ ಅನೇಕ ಕಡೆಗಳಲ್ಲಿ ಮೆರವಣಿಗೆ, ಪ್ರದರ್ಶನ, ಸಭೆ ಸಮಾರಂಭಗಳು ನಡೆಯುತ್ತವೆ. ಆದರೆ ಈ ಆಚರಣೆಗಳು ಎಷ್ಟು ಅರ್ಥಗರ್ಭಿತವಾದದ್ದು ಎನ್ನುವುದು ಅವನ್ನು ಆಚರಿಸುವವರನ್ನು, ಅವರ ಉದ್ದೇಶಗಳನ್ನು ಅವಲಂಬಿಸಿರುತ್ತದೆ. ನಮ್ಮಲ್ಲೂ ಇದು ಸಾಂಕೇತಿಕವಾಗಿದೆ ಎಂದೇ ಹೇಳಬಹುದು. ಮಹಿಳಾ ಪರ ಯೋಜನೆಗಳ ಬಗ್ಗೆ, ಅವರಿಗಾಗಿ ಇರುವ ಕಾಳಜಿ ಬಗ್ಗೆ ಸರ್ಕಾರ ಜಾಹಿರಾತು, ಘೋಷಣೆಗಳ ಮೂಲಕ ಬೆನ್ನು ತಟ್ಟಿಕೊಳ್ಳುತ್ತದೆ. ಎಲ್ಲೋ ಕೆಲವರು ಇನ್ನೂ ಆಗಬೇಕಾಗಿರುವುದನ್ನು ಕುರಿತು, ಸಾಗಬೇಕಾಗಿರುವ ದಾರಿಯ ಕುರಿತು ಚಿಂತಿಸುತ್ತಾರೆ. ಆದರೂ ಬಹಳಷ್ಟು ಮಂದಿಗೆ ಮೂವತ್ತು ದಿನಗಳಲ್ಲಿ ಇದೂ ಒಂದು ದಿನ, ಅಷ್ಟೆ!

ಆದರೆ, ಹಾಗೆಂದು ನಾವು ತೀರಾ ನಿರಾಶಾವಾದಿಗಳೂ ಆಗಬೇಕಾಗಿಲ್ಲ. ಭಾರತೀಯ ಮಹಿಳಾ ರಂಗ ಸಾಕಷ್ಟು ಬದಲಾವಣೆಗಳನ್ನು ಕಂಡಿದೆ. ಕೆಲವು ಸಂದರ್ಭಗಳಲ್ಲಿ ಹೋರಾಟ ನಡೆಸಿ ಜಯಗಳಿಸಿದರೆ, ಕೆಲವು ಸನ್ನಿವೇಶಗಳಲ್ಲಿ ನಿರಾಯಾಸದ ಗೆಲುವು ಲಭಿಸಿದೆ. ಇದಕ್ಕೆ ರಾಜಕೀಯ ಪರಿಸರವೂ ಕಾರಣವೆನ್ನಬಹುದು.

ಭಾರತದಲ್ಲಿ ಮಹಿಳಾಪರ ಯೋಜನೆಗಳಲ್ಲಿ ಏನಾದರೂ ಕೊರತೆ ಇದ್ದಿರಬಹುದು; ಒಂದು ರೀತಿ ಅಪೂರ್ಣವಾಗಿರಬಹುದು. ಆದರೆ ಅವು ನಿರರ್ಥಕವಂತೂ ಅಲ್ಲ. ಅಂಕಿ ಅಂಶಗಳ ಪ್ರಕಾರ ನಮ್ಮ ದೇಶದಲ್ಲಿ ತಾಯಂದಿರ ಮರಣದ ಸಂಖ್ಯೆ ಜಾಸ್ತಿಯೇ ಇರಬಹುದು. ಆದರೆ ಪುರುಷರಿಗಿಂತ ಮಹಿಳೆಯರೇ ದೀರ್ಘಾಯುಷಿಗಳಾಗಿದ್ದಾರೆ. ಹೆಚ್ಚು ಹೆಚ್ಚು ಮಹಿಳೆಯರು ಈಗ ಓದು-ಬರಹ ಕಲಿಯುತ್ತಿದ್ದಾರೆ. ಹೊಸ ಹೊಸ ವೃತ್ತಿಗಳನ್ನು ಆರಿಸಿ ಕೊಳ್ಳುತ್ತಿದ್ದಾರೆ. ಈವರೆಗೂ ಹೊಕ್ಕಿರದಿದ್ದ ಕ್ಷೇತ್ರಗಳನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುತ್ತಿದ್ದಾರೆ. ಬಡ ಮಹಿಳೆಯರಿಗೂ ಸಾಲ ಸೌಲಭ್ಯಗಳು ಸಿಗುತ್ತಿವೆ. ಆರ್ಥಿಕ ಕಾರಣಗಳಿಗಾಗಿ ಅವರು ಪುರುಷರನ್ನೇ ನೆಚ್ಚಿಕೊಂಡಿರಬೇಕಾಗಿದ್ದ ಕಾಲವಿತ್ತು. ಆದರೆ ಈಗ ಅವರೂ ಪುರುಷನ ಹಂಗಿಲ್ಲದೆ ಬದುಕಬಲ್ಲರು. ಇವೆಲ್ಲವೂ ಆಂದೋಳನದ ಸಹಾಯವಿಲ್ಲದೇ ಆಗುತ್ತಿರಲಿಲ್ಲ.

ಭಾರತದಲ್ಲಿ ಹೊಸ ಪೀಳಿಗೆಯ ಹುಡುಗಿಯರಲ್ಲಿ ಈಗ ಹಿಂದೆಂದೂ ಕಂಡಿರದಿದ್ದ ಆತ್ಮವಿಶ್ವಾಸವಿದೆ. ಅದರಲ್ಲೂ ನಗರದ ಹುಡುಗಿಯರಲ್ಲಿ ಇದು ಎದ್ದು ಕಾಣುತ್ತದೆ. ಸಮಾನ ಹಕ್ಕುಗಳಿಗಾಗಿ ಅವರ ಹಿಂದಿನ ಪೀಳಿಗೆ ನಡೆಸಿದ ಹೋರಾಟದ ಫಲ ಇದು. ಈ ಪೀಳಿಗೆಯ ಹುಡುಗಿಯರಿಗೆ ತಮ್ಮ ಸ್ವಂತಿಕೆಗೆ ಮಿತಿ ಹಾಕಿಕೊಳ್ಳುವುದು ಹಿಡಿಸದು. ತಮ್ಮ ಹಕ್ಕುಗಳನ್ನೂ ಚಲಾಯಿಸಲು ಯಾವುದೇ ಹಿಂಜರಿಕೆ ಅವರಿಗಿಲ್ಲ. ತಮ್ಮ ನಿಲುವನ್ನು ದೃಢವಾಗಿ ಸಮರ್ಥಿಸಿಕೊಳ್ಳಬಲ್ಲ ದಾರ್ಷ್ಟ್ಯ ಅವರಿಗಿದೆ. ಪುರುಷರ ನಿಲುವುಗಳು ಏನೇ ಇರಲಿ, ಲೆಕ್ಕಿಸದೆ ಕಟ್ಟುಪಾಡುಗಳನ್ನು ಕಳಚಿ ಬಾಳಬಲ್ಲರು. ಈ ಹುಡುಗಿಯರಿಗೆ ಮಾರ್ಚ್ 8ರ ಅರಿವು ಇಲ್ಲದಿದ್ದರೆ ಏನಾಯಿತು ? ಇವರಿಗೆ ತಮ್ಮತನದ ಅರಿವಿದೆ. ಇವರಿಗೆ ಈ ಸಾಂಕೇತಿಕ ಆಚರಣೆಗಳ ಅವಶ್ಯಕತೆಯೇ ಇಲ್ಲ.

ಆದರೆ ಎಲ್ಲಾ ಮಹಿಳೆಯರ ಪರಿಸ್ಥಿತಿ ಒಂದೇ ಆಗಿರಲಿಕ್ಕೆ ಸಾಧ್ಯವಿಲ್ಲವಲ್ಲ. ಮಹಿಳೆಯರ ಹಕ್ಕುಗಳು ಕೇವಲ ಕಡತಗಳಲ್ಲೇ ಉಳಿದಿರುವವರೆಗೆ ಮಹಿಳಾ ದಿನಕ್ಕೆ, ಆದರ ಆಚರಣೆಗೆ ಮಹತ್ವವಿದ್ದೇ ಇದೆ.

ಮಹಿಳೆಯರ ಮೇಲೆ ಒಂದಲ್ಲ ಒಂದು ಮೂಲೆಯಲ್ಲಿ ಆಗುತ್ತಿರುವ ಹಿಂಸೆ ದೌರ್ಜನ್ಯಗಳ ಕುರಿತು ಸುದ್ದಿ ಹೊರಬರುತ್ತಲೇ ಇದೆ. ವಾರಣಾಸಿ, ವೃಂದಾವನ್ ಮುಂತಾದ ಕಡೆ ಇರುವ ಬಡಪಾಯಿ ಮಹಿಳೆಯರ ಶೋಷಣೆ ಮುಂದುವರಿದಿದೆ. ಅದನ್ನೆಲ್ಲಾ ಯೋಚಿಸಿದಾಗ ಭಾರತೀಯ ಮಹಿಳೆಯ ಪ್ರಗತಿ ಇನ್ನೂ ಎಷ್ಟು ದೂರದಲ್ಲಿದೆ ಎಂದು ಚಿಂತಿಸುವಂತಾಗುತ್ತದೆ. ಆ ಬದಿಯ ಹೊಲವೇಕೆ ಹಸಿರಾಗಿಲ್ಲ. ಅಲ್ಲೂ ಹಸಿರು ಮೂಡಿಸುವ ಪ್ರಯತ್ನ ಹೇಗೆ ಮಾಡಬೇಕು ಎಂಬುದನ್ನು ಸ್ಪಷ್ಟಪಡಿಸಬೇಕು. ಮಾರ್ಚ್ 8 ಈ ಬಗ್ಗೆ ಬೆಳಕು ಚೆಲ್ಲಬೇಕು, ದಾರಿ ತೋರಬೇಕು.

ಕೃಪೆ - ದಿ ಹಿಂದೂ
ಕನ್ನಡಕ್ಕೆ - ಹೆಚ್.ಎನ್. ಗೀತಾ

ಮಾರ್ಚ್ 8 - ಅಂತರರಾಷ್ಟ್ರೀಯ ಮಹಿಳಾ ದಿನದ ನಾಂದಿ

- ತಾರಾ ರೆಡ್ಡಿ

ಯೂರೋಪಿನಲ್ಲಿರುವ ಸ್ಟುಟ್‌ಗಾರ್ಟ್‌ನಲ್ಲಿ ಒಂದು ಅಂತರರಾಷ್ಟ್ರೀಯ ಸಮಾಜವಾದಿ ಪರಿಷತ್ತಿನ ಸಭೆ 1907ರಲ್ಲಿ ಆಯೋಜಿಸಲಾಗಿತ್ತು. ಸಾಮ್ರಾಜ್ಯಶಾಹಿ, ವಸಾಹತು ಪದ್ಧತಿ, ಯುದ್ಧ, ಮಿಲಿಟರಿ ದಬ್ಬಾಳಿಕೆ ಇತ್ಯಾದಿಗಳನ್ನು ವಿರೋಧಿಸುವ ನಿರ್ಣಯವನ್ನು ಅಲ್ಲಿ ಸಮಾವೇಶಗೊಂಡಿದ್ದ ದುಡಿಯುವ ವರ್ಗದ ಪ್ರತಿನಿಧಿಗಳು ಅಂಗೀಕರಿಸುವವರಿದ್ದರು. ಅಂತೆಯೇ ಅವನ್ನು ಹತ್ತಿಕ್ಕಲು ಐಕ್ಯ ಹೋರಾಟ ನಡೆಸುವುದಕ್ಕಾಗಿ ಒಂದು ಸಮಾನ ಭೂಮಿಕೆಯನ್ನು ರಚಿಸುವ ಪ್ರಯತ್ನ ನಡೆದಿತ್ತು. ಜರ್ಮನಿಯ ಕಮ್ಯುನಿಸ್ಟ್ ಪಕ್ಷದ ಹಾಗೂ ಕಾರ್ಮಿಕ ಸಂಘದ ಹಿರಿಯ ನಾಯಕಿ ಕ್ಲಾರಾಜೆಟ್‌ಕಿನ್ ಸಮಾವೇಶದಲ್ಲಿ ಮಹಿಳಾ ಹಕ್ಕಿನ ಪ್ರಶ್ನೆಯನ್ನು ಪ್ರಧಾನ ವಿಷಯವನ್ನಾಗಿ ಮಂಡಿಸಿದರು. ಆಕೆ ಒಂದು ಪ್ರಶ್ನೆಯನ್ನು ಕೇಳಿದರು : "ಎಲ್ಲ ದೇಶಗಳಲ್ಲೂ ಮಹಿಳೆಯರು, ತಾಯಂದಿರು ಮತ್ತು ಬಾಲಕಿಯರು ತಮ್ಮದೇ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಾವೇಶದಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸುತ್ತಿರುವ ನೀವು ಆ ಪ್ರಶ್ನೆಗಳನ್ನು ಎತ್ತುವುದಿಲ್ಲವೇಕೆ ? ಅವರನ್ನು ಅಂತರರಾಷ್ಟ್ರೀಯ ಐಕ್ಯ ಹೋರಾಟದಲ್ಲಿ ಸೇರ್ಪಡೆಗೊಳಿಸುವುದು ನಿಮಗೆ ಬೇಡವೇನು?" 1907ರ ಆಗಸ್ಟ್ 17ರಂದು ಈ ವಿಷಯದ ಬಗ್ಗೆ ಗಂಭೀರವಾದ ಚರ್ಚೆ ನಡೆಯಿತು. ಮಹಿಳೆಯ ಹಕ್ಕು, ತಾಯಂದಿರ ಹಾಗೂ ಬಾಲಕಿಯರ ಹಕ್ಕು, ಪುರುಷರಿಗಿರುವಂತೆ ಮಹಿಳೆಯರಿಗೂ ಇರಬೇಕಾದ ಮತದಾನದ ಹಕ್ಕು ಮತ್ತು ಇವೆಲ್ಲವುಗಳನ್ನೂ ಪಡೆಯಲು ಮಹಿಳೆಯರು ನಡೆಸುತ್ತಿದ್ದ ಹೋರಾಟಗಳಿಗೆ ಬೆಂಬಲ, ಇವನ್ನು ಪಡೆಯಲು ಮಹಿಳೆಯರು ನಡೆಸುತ್ತಿದ್ದ ಹೋರಾಟಗಳಿಗೆ ಬೆಂಬಲ, ಇವನ್ನು ಅಂತರ್ರಾಷ್ಟ್ರೀಯ ದುಡಿಯುವ ವರ್ಗವು ಹೃತ್ಪೂರ್ವಕವಾಗಿ ನೀಡುತ್ತದೆಂಬು ಸಮಾವೇಶವು ಒಂದು ನಿರ್ಣಯದಲ್ಲಿ ಘೋಷಿಸಿತು. ಯುದ್ಧವಿರೋಧ, ಶಾಂತಿ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದ ಹೇಗೆ ಅಂತರರಾಷ್ಟ್ರೀಯ ಚಳುವಳಿಯ ಘೋಷಣಾ ಪತ್ರದಲ್ಲಿ ಸೇರಿವೆಯೋ ಹಾಗೆ ಮಹಿಳೆಯ ಹಕ್ಕೂ ಸೇರಬೇಕೆಂದು ತೀರ್ಮಾನಿಸಲಾಯಿತು.

ಈ ಸಮಾವೇಶದಲ್ಲಿ 15 ವಿವಿಧ ದೇಶಗಳ 58 ಮಹಿಳೆಯರು ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಅವರು ಪ್ರತ್ಯೇಕವಾಗಿ ಅಲ್ಲಿಯೇ ಮೊದಲ ಅಂತರರಾಷ್ಟ್ರೀಯ ಸಮಾಜವಾದಿ ಮಹಿಳೆಯರ ಸಮಾವೇಶವೊಂದನ್ನು ನಡೆಸಿದರು. ಜರ್ಮನಿ, ರಷ್ಯಾ, ಇಟಲಿ, ಹಾಲೆಂಡ್, ಬೆಲ್ಜಿಯಂ, ಬೊಹೀಮಿಯಾ ಮತ್ತು ಫಿನ್ಲೆಂಡ್‌ಗಳಿಂದ ಬಂದಿದ್ದ ದುಡಿಯುವ ವರ್ಗದ ಚಳುವಳಿಯ ಕಾರ್ಯಕರ್ತೆಯರು ಮಹಿಳಾ ಹಕ್ಕುಗಳ ಬಗ್ಗೆ ಸುದೀರ್ಘವಾದ ಚರ್ಚೆ ನಡೆಸಿದರು. ಭಾರತದಿಂದ ಈ ಸಮಾವೇಶದಲ್ಲಿ ಉಪಸ್ಥಿತರಿದ್ದವರೆಂದರೆ ಮೇಡಂ ಕಾಮಾ. ಅವರು ಸಮಾವೇಶದ ನಿರ್ಣಯಕ್ಕೆ ಸೋದರಿಭಾವದಿಂದ ಸಂಪೂರ್ಣ ಸಮರ್ಥನೆಯನ್ನು ನೀಡಿದರು.

ಇದಾದನಂತರ 1910ರಲ್ಲಿ ಎರಡನೆಯ ಅಂತರ ರಾಷ್ಟ್ರೀಯ ಸಮಾಜವಾದಿ ಮಹಿಳಾ ಸಮಾವೇಶವು ಜರುಗಿತು. ಅದು ನಡೆದದ್ದು ಕೋಪನ್‌ಹೇಗನ್‌ನಲ್ಲಿ. ಅಲ್ಲಿ ಕ್ಲಾರಾ ಜೆಟ್‌ಕಿನ್ ಒಂದು ಸಲಹೆಯನ್ನು ನೀಡಿದರು; "ಪ್ರಪಂಚದ ಎಲ್ಲ ಮಹಿಳೆಯರೂ ತಮ್ಮ ಹಕ್ಕುಗಳಿಗಾಗಿ ಹಾಗೂ ಹೋರಾಟಗಳನ್ನು ಮುಂದುವರಿಸಲು ಒಂದು ದಿನವನ್ನು ಅಂತರರಾಷ್ಟ್ರೀಯ ಮಹಿಳಾ ದಿನವನ್ನಾಗಿ ನಿಗದಿಗೊಳಿಸಬೇಕು ಮತ್ತು ಅದನ್ನು ಅಂತರರಾಷ್ಟ್ರೀಯವಾಗಿ ಆಚರಿಸಬೇಕು." ಮಹಿಳೆಯರ ಅಂತರರಾಷ್ಟ್ರೀಯ ಐಕ್ಯತೆ ಮತ್ತು ಹೋರಾಟಗಳನ್ನು ಗಟ್ಟಿಗೊಳಿಸಲು ಈ ಸಲಹೆಯನ್ನು ಅಂಗೀಕರಿಸಬೇಕೆಂದು ಸಮಾವೇಶವು ಸರ್ವಾನುಮತದಿಂದ ತೀರ್ಮಾನಿಸಿತು.

ಆ ಸಂದರ್ಭದಲ್ಲೇ ಮಾರ್ಚ್ 8 ಆ ಮಹಿಳಾ ದಿನವಾಗಿರಬೇಕೆಂದೂ ನಿರ್ಣಯಿಸಲಾಯಿತು. ಆ ದಿನವನ್ನೇ ಆಯ್ಕೆ ಮಾಡಿಕೊಂಡದ್ದಕ್ಕೆ ಕಾರಣವಿದೆ; 1857ರಲ್ಲಿ ನ್ಯೂಯಾರ್ಕಿನ ಸಿದ್ಧ ಉಡುಪು ತಯಾರಿಸುವ ಕಾರ್ಮಿಕರು ಒಂದು ದೊಡ್ಡ ಪ್ರತಿಭಟನೆಯನ್ನು ನಡೆಸಿ ಉತ್ತಮ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದರು. ಆಗ ನಡೆದಿದ್ದ ಸತ್ಯಾಗ್ರಹವು ಮಹಿಳಾ ಕಾರ್ಮಿಕರ ಕ್ರೂರ ಶೋಷಣೆಯ ವಿರುದ್ಧವಾಗಿ ನಡೆದಿದ್ದದ್ದು. ಅವರ ಸತ್ಯಾಗ್ರಹವನ್ನು ಮುರಿದು ಬೀಳುವಂತೆ ಮಾಡಲು ಆ ಮಹಿಳಾ ಕಾರ್ಮಿಕರ ಮೇಲೆ ಉಗ್ರವಾದ ಹಲ್ಲೆಯನ್ನು ನಡೆಸಲಾಗಿತ್ತು. ಅದು

ಜರುಗಿದ್ದುದು ಮಾರ್ಚ್ ೮ರಂದು. ಆ ಹೋರಾಟಕ್ಕೆ ಇಡೀ ವಿಶ್ವದಲ್ಲಿ ದೊಡ್ಡ ಪ್ರಮಾಣದ ಬೆಂಬಲ ದೊರಕಿತ್ತು. ಆದ್ದರಿಂದಲೇ ಮಾರ್ಚ್ ಎಂಟರಂದು ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸುವುದು ಔಚಿತ್ಯಪೂರ್ಣವಾಗಿರುತ್ತದೆಂದು ಕೋಪನ್ ಹೇಗನ್ ಸಮಾವೇಶದಲ್ಲಿ ಆ ನಿರ್ಣಯವನ್ನು ಸ್ವೀಕರಿಸಲಾಗಿತ್ತು.

ಮಹಿಳಾ ಹಕ್ಕುಗಳ ಹೋರಾಟಗಳೆಲ್ಲವುಗಳ ಮುಂಚೂಣಿಯಲ್ಲಿ ಜರ್ಮನಿಯ ಇನ್ನೊಬ್ಬ ಮಹಿಳೆಯೂ ಇದ್ದರು ಆಕೆಯೂ ಕಾರ್ಮಿಕ ಚಳುವಳಿಯ ಮತ್ತು ಜರ್ಮನಿಯ ಕಮ್ಯುನಿಸ್ಟ್ ಪಕ್ಷದ ವಿಖ್ಯಾತ ನಾಯಕಿ. ಕ್ಲಾರಾ ಜೆಟ್‌ಕಿನ್ ಜೊತೆ ಎಲ್ಲ ಹೋರಾಟಗಳಲ್ಲಿಯೂ ಕೈ ಜೋಡಿಸಿದ ಆಕೆಯ ಹೆಸರು ರೋಸಾ ಲುಕ್ಸೆಂಬರ್ಗ್.

ಮಹಿಳಾ ಸ್ವಾತಂತ್ರ್ಯ ಹಾಗೂ ಎಲ್ಲ ಕ್ಷೇತ್ರಗಳಲ್ಲಿಯೂ ಸಮಾನತೆಯ ಧ್ಯೇಯಕ್ಕಾಗಿ ಕ್ರಮೇಣ ಈ ಅಂತರರಾಷ್ಟ್ರೀಯ ಮಹಿಳಾ ದಿನವು ಇಡೀ ವಿಶ್ವವನು ವ್ಯಾಪಿಸಿದೆ. ಮೊಟ್ಟಮೊದಲಿಗೆ ಅಂತರರಾಷ್ಟ್ರೀಯ ಮಹಿಳಾ ದಿನದ ಪ್ರಸ್ತಾಪವನ್ನು ಮುಂದಿಡುವಾಗ ಕ್ಲಾರಾ ಜೆಟ್‌ಕೆನ್ ತಮ್ಮ ನಿರ್ಣಯದಲ್ಲಿ ಹೇಳಿದ್ದುದು ಇದು ; ''ವಿಶ್ವದಲ್ಲಿ ಪ್ರತಿಗಾಮಿ ಶಕ್ತಿಗಳೆಲ್ಲಾ ಒಂದಾಗಿ ಹಲ್ಲೆ ನಡೆಸುತ್ತಿರುವಾಗ ವಿಶ್ವದ ಎಲ್ಲ ಮಹಿಳೆಯರೂ ಐಕ್ಯತೆಯಿಂದ ಒಂದು ರಂಗವನ್ನು ರಚಿಸಿಕೊಳ್ಳಬೇಕಾದ್ದು ಅಗತ್ಯವಾಗಿದೆ.'' 1910ರಿಂದ ಎಷ್ಟೋ ಕಾಲ ಕಳೆದಿದೆ. ನಾಲ್ಕನೆಯ ವಿಶ್ವ ಮಹಿಳಾ ಸಮ್ಮೇಳನವು ಬೀಜಿಂಗ್‌ನಲ್ಲಿ ಜರುಗಿದಾಗ ಸರ್ಕಾರಗಳ ಪ್ರತಿನಿಧಿಗಳಲ್ಲದೆ ಸರ್ಕಾರೇತರ ಸಂಸ್ಥೆಗಳವರೂ ಸೇರಿದಂತೆ ಮೂವತ್ತು ಸಾವಿರ ಮಹಿಳಾ ಪ್ರತಿನಿಧಿಗಳು ಒಟ್ಟಾಗಿದ್ದರು. ಅದೂ ಪ್ರತಿಗಾಮಿ ಶಕ್ತಿಗಳ ವಿರುದ್ಧದ ಒಂದು ಬೃಹತ್ ಐಕ್ಯರಂಗದಂತೆಯೇ ತೋರಿಬಂದಿತ್ತು. ಈಗ ನಾವು 2000ನೇ ಇಸವಿಯ ಮಾರ್ಚ್ ೮ ಕ್ಕೆ ಬಂದಿದ್ದೇವೆ, ವಿಶ್ವದ ಎಲ್ಲ ಮಹಿಳೆಯರೂ ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ ಹಾಗೂ ಬಡತನದ ವಿರುದ್ಧವಾಗಿ 'ವಿಶ್ವ ಮಹಿಳಾ ಹೋರಾಟ'ದ ಕಣದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇದರಲ್ಲಿ ಕ್ಲಾರಾ ಜೆಟ್‌ಕಿನ್‌ರ ಪ್ರಭಾವಯುತ ಸಂದೇಶಕ್ಕೆ ಜೀವ ತುಂಬಿಬಂದಿದೆ ಎನ್ನಬಹುದು.

(ಮೂಲ ಮರಾಠಿಯಿಂದ ಅನುವಾದ: ಜಿ. ಆರ್)

ಶತಮಾನದ ಸಾಧನೆ

ಕಳೆದ ಶತಮಾನದ ಆದಿಯಲ್ಲಿ ಮಹಿಳಾ ಅಕ್ಷರಸ್ಥರ ಸಂಖ್ಯೆ ಶೇಕಡಾ ಒಂದು ಕೂಡಾ ಇರಲಿಲ್ಲ ಎಂದರೆ ನಂಬುವಿರಾ ? 1901ರಲ್ಲಿ ಪ್ರತಿ ಸಾವಿರ ಮಹಿಳೆಯರಿಗೆ ಕೇವಲ ೮ ಮಂದಿ ಮಹಿಳೆಯರು ಅಕ್ಷರಸ್ಥರಿದ್ದರು. ಪ್ರಾಥಮಿಕ ಹಂತದಲ್ಲಿ ಶಾಲೆಗೆ ಕಳುಹಿಸಿದ ಪ್ರತಿ ನೂರು ಗಂಡು ಹುಡುಗರಿಗೆ, ಕೇವಲ 12 ಹೆಣ್ಣು ಮಕ್ಕಳಿದ್ದರು. ಇಡೀ ದೇಶದಲ್ಲಿ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆದ ಮಹಿಳೆಯರ ಸಂಖ್ಯೆ ಕೇವಲ 264 ಇತ್ತು. ಆದರೆ 1050ರ ಹೊತ್ತಿಗೆ ಶಾಲೆಗಳಲ್ಲಿ ಪ್ರತಿ ನೂರು ಹುಡುಗರಿಗೆ 39 ಹುಡುಗಿಯರಿದ್ದರು. ಮಹಿಳಾ ಅಕ್ಷರಸ್ಥರ ಸಂಖ್ಯೆ ಶೇಕಡಾ 39ಕ್ಕೆ ಏರಿತು. 1995ರಲ್ಲಿ ಉನ್ನತ ವಿದ್ಯಾಭ್ಯಾಸಕ್ಕೆ ಸೇರಿದ ಮಹಿಳೆಯರ ಸಂಖ್ಯೆಯೇ ಇಪ್ಪತ್ತು ಲಕ್ಷಕ್ಕೆ ಏರಿತು. ದೇಶದ ಜನಸಂಖ್ಯೆಗೆ ಹೋಲಿಸಿದರೆ, ಇದು ಕೂಡಾ ಸಣ್ಣ ಸಂಖ್ಯೆಯಾದರೂ, ಶತಮಾನದ ಕೊನೆಯಲ್ಲಿ ಪರಿಸ್ಥಿತಿ ಬಹಳಷ್ಟು ಆಶಾದಾಯಕವಾಗಿ ಬದಲಾಯಿತು.

ಭಾರತಕ್ಕೆ ಹಿಡಿದ 'ಬ್ಯೂಟಿ ಭೂತ'

ಕಳೆದ ಶತಮಾನದ ಕೊನೆಯ ಹತ್ತು ವರ್ಷಗಳು ಭಾರತದಲ್ಲಿ 'ಬ್ಯೂಟಿ ಬಿಸಿನೆಸ್' ಎಗ್ಗಿಲ್ಲದೆ ಬೆಳೆಯಿತು. ಪತ್ರಿಕೆಗಳು ಮತ್ತು ಸಮೂಹ ಮಾಧ್ಯಮಗಳ ಜಂಟಿ ಸಹಕಾರದಲ್ಲಿ ಅತಿವೇಗವಾಗಿ ಬೆಳೆದ ಉದ್ಯಮವಿದು. ಮಹಿಳೆಯರ ಪೂರ್ಣ ವ್ಯಕ್ತಿತ್ವವನ್ನು ಕಡೆಗಣಿಸಿ, ಕೇವಲ ಅವರ ದೇಹ ಸೌಂದರ್ಯದ ಮೇಲಷ್ಟೆ ಗಮನವನ್ನು ಮತ್ತೆ ಕೇಂದ್ರೀಕರಿಸಲು ಕಾರಣವಾಯಿತು. ಸಂಕುಚಿತ ಅರ್ಥದ ಸೌಂದರ್ಯದ ಪರಿಕಲ್ಪನೆಯನ್ನು ಭಾರತ ಆಮದು ಮಾಡಿಕೊಂಡು, ಅದರೊಡನೆಯೇ ಎಂದೂ ಭಾರತದಲ್ಲಿ ಕಂಡಿಲ್ಲದ ಅನೊರೆಕ್ಸಿಯಾ, ಬುಲೇಮಿಯಾದಂಥಾ ರೋಗಗಳನ್ನೂ ಆಮದು ಮಾಡಿಕೊಂಡಿತು. ಹೊರಗಿನ ಈ 'ಕಡ್ಡಿ ದೇಹ'ದ ಮಾದರಿಯಂತೆ ತಮ್ಮನ್ನು ರೂಪಿಸಿಕೊಳ್ಳುವ ಭರದಲ್ಲಿ ಅನೇಕ ಹುಡುಗಿಯರು ತಿನ್ನದೆ, ತಿನ್ನಲಾರದೆ ಪರಿತಪಿಸುತ್ತಿದ್ದಾರೆ. ಥಟ್ಟನೆ ಭಾರತವನ್ನು ಬಂದು ಹಿಡಿದ ಈ ಬ್ಯೂಟಿ ಭೂತದಿಂದ ಯಥೇಚ್ಛವಾಗಿ ಲಾಭ ಮಾಡಿರುವವರು ಕಾಸ್ಮೆಟಿಕ್ ಸರ್ಜನರು ಮತ್ತು ಕಾಸ್ಮೆಟಿಕ್ ಇಂಡಸ್ಟ್ರಿ.

ಪ್ರೀತಿಯ ಅಚಲಾ

ಹೀಗೊಂದು ಪತ್ರಿಕೆಯ ಸುದ್ದಿ - ''ನೀವು ಶೋಷಿತರು ಎಂದು ಹೇಳಿಕೊಳ್ಳುತ್ತೀರಲ್ಲ ನಮ್ಮಷ್ಟು (ಗಂಡಸರಷ್ಟು) ಶೋಷಿತರು ಯಾರಿದ್ದಾರೆ ಹೇಳಿ? ವರದಕ್ಷಿಣೆ ತಾರದ ಸೊಸೆಯನ್ನು ಸುಡುವವಳು ಅತ್ತೆಯೇ ! ಹೇಳಿ ಯಾರಿಂದ ಯಾರ ಶೋಷಣೆ ನಡೆಯುತ್ತಿದೆ''.

ಈ ನುಡಿಮುತ್ತುಗಳನ್ನು, ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ಆಣಿ ಮುತ್ತುಗಳನ್ನು ಉದುರಿಸಿದವರು ಯಾರೋ ಮಠಾಧಿಪತಿಗಳೋ, ಕಟ್ಟೆ ಮೇಲೆ ಪಂಚಾಯಿತಿ ಮಾಡುವ ಪಟೇಲರೋ ಅಥವಾ ವೇದಾಧ್ಯಯನ ಪಂಡಿತರೋ ಅಲ್ಲ. ಇಡೀ ನಾಡನ್ನು ಶಿಕ್ಷಣದ ಮುಖಾಂತರ ಮುನ್ನಡೆಸುವ ದೊಡ್ಡ ಜವಾಬ್ದಾರಿ ಹೊತ್ತ ಶಿಕ್ಷಣ ಸಚಿವ, ಅದೂ ವೇದಿಕೆ ಎಥದು ? ಯಾವುದೋ ಮಠದ ಸುವರ್ಣ ಮಹೋತ್ಸವವೋ, ಜೀರ್ಣೋದ್ಧಾರಗೊಂಡ ದೇವಾಲಯದ ವೇದಿಕೆಯೋ ಅಲ್ಲ. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸುಸಂದರ್ಭದಂದು ! ನಮ್ಮದೂ ಒಂದು ದಿನವಿದೆಯಲ್ಲ, ಏನಾದರೂ ಹೊಸ ಬೆಳಕು ಮಿಂಚೀತೇ ಎನ್ನುವ ಆಸೆ ಕಂಗಳಿಂದ ಕುಳಿತ ಸಾವಿರ, ಲಕ್ಷ ಜನ ಮಾನಿನಿಯ ಮುಂದೆ ಉಸುರಿದ ಮಹಾ ಮಂತ್ರವಿದು !! ನಮ್ಮ ಪತ್ರಿಕಾ ಮಾಧ್ಯಮದವರಿಗೋ ಇಂಥ ಮಾತುಗಳೆಂದರೆ ಹೆಜ್ಜೇನು ಸವಿದಂತೆ ! ಇಂಥ ಮಾಣಿಕ್ಯದ ಹರಳುಗಳನ್ನು ಆಯ್ದುಕೊಳ್ಳಲು ಕಾತುರರಾಗಿ ನಿಂತಿರುತ್ತಾರೆ. ಇಂಥವು ಸಿಕ್ಕರೆ ಸಾಕು ಪಟಪಟನೆ ಎಲ್ಲ ಬಾಕ್ಸ್ ಐಟಂಗಳಾಗಿಸಿ ದಪ್ಪಕ್ಷರಗಳಲ್ಲಿ ರಾರಾಜಿಸುವಂತೆ ಮಾಡುವ ಚಾಣಾಕ್ಷರು ಅವರು.

ಇಲ್ಲಿ ಎರಡು ಮಹತ್ವದ ಅಂಶಗಳನ್ನು ಗಮನಿಸಬೇಕು ನನ್ನ ನಿನ್ನಂಥವರು. ಒಂದು-ಮಹಿಳೆಯ ವಿಚಾರ ಬಂದಾಗ ಎಂಥ ಜವಾಬ್ದಾರಿಯುತ ಸ್ಥಾನದಲ್ಲಿರುವವರೂ ಎಂತಹ ಬೇಜವಾಬ್ದಾರಿಯ ಮಾತುಗಳನ್ನೇ ಆಡುತ್ತಾರೆನ್ನುವುದು. ಇನ್ನೊಂದು-ಎಂಥ ಗಂಭೀರ ವೇದಿಕೆಯಲ್ಲೂ ಎಂಥ ಮಹತ್ವದ ದಿನದಲ್ಲೂ ಈ ಎಲ್ಲದರ ಗಹನದ ಬಗ್ಗೆ ಗಮನ ಕೊಡದೇ ಹಗುರವಾಗಿ ಮಾತನಾಡಿ ಗಹನತೆಯನ್ನೆಲ್ಲಾ ತೇಲಿಸಿ ಬಿಡುವ ಕುತ್ಸಿತ ಮನೋಭಾವ. ಗಂಡಸಿನ ಈ ಕೆಟ್ಟ ಚಾಳಿ ಇದು, ಇಂದು ನೆನ್ನೆಯದಲ್ಲ. ಶತಶತಮಾನಗಳಿಂದ ನಡೆದುಕೊಂಡೇ ಬಂದಿರುವಂಥದು.

ಶೋಷಣೆ ಎನ್ನುವ ಪದದ ಅರ್ಥ, ವ್ಯಾಪ್ತಿ, ಹರಹು ಇವುಗಳೆಲ್ಲ ಬೇಡ, ಕಡೆಗೆ ಅದರ ಅನುಭವದ ಪ್ರಾರಂಭಿಕ ಹಂತವಾದರೂ ಈ ಮಂದಿಗೆ ಗೊತ್ತಿದೆಯೇ ಎನ್ನುವುದು ನನ್ನ ಅನುಮಾನ. ಸ್ವಾಮಿ ಮಂತ್ರಿಗಳೇ ಇಲ್ಲಿ ಕೇಳಿ. ಮಹಾಭಾರತದ ಮಾದ್ರಿಯಿಂದ ಹಿಡಿದು ನಿನ್ನೆ ಮೊನ್ನೆಯ ಕನ್ವರಳ ವರೆಗೆ ಸತ್ತ ಗಂಡನ ಚಿತೆಗೆ ಹೆಂಡತಿಯ ಕೈಕಾಲು ಕಟ್ಟಿ ಎಸೆದು ಜೀವಂತ ಸುಟ್ಟುಹಾಕುತ್ತಿದ್ದುದು ಹೆಣ್ಣುಗಳನ್ನು ಮಾತ್ರ. ಗಂಡುಗಳನ್ನಲ್ಲ ಎನ್ನುವ ಪ್ರಾಥಮಿಕ ಜ್ಞಾನ ನಿಮ್ಮಂತಹವರಿಗೆ ತಿಳಿದಿದ್ದರೆ ಒಳ್ಳೆಯದೇನೋ.

ಇಂದು ವಿಧವೆಯ ಸ್ಥಿತಿಗಳಿಗೆ ಯಾವ ಅಧ್ಯಯನ ನಡೆದಿದೆ ಹೇಳಿ ಮಹಾಶೋಷಿತರೇ ? ಕಾಶಿಯ ಅನ್ನಸತ್ರಗಳಲ್ಲಿ ಸಹಸ್ರ ಸಹಸ್ರ ಸಂಖ್ಯೆಯ ವಿಧವೆಯರು ಅವಮಾನ, ಕಣ್ಣೀರುಗಳನ್ನು ನುಂಗಿಕೊಂಡು, ತಮ್ಮ ಪಾಲಿನ ಆಸ್ತಿಯ ಹಕ್ಕುಗಳನ್ನೆಲ್ಲಾ ಮಾವನೆನ್ನುವ ಮಹಾಮಹಿಮನಿಗೆ ಒಪ್ಪಿಸಿ ಕುರಿಗಳಂತೆ ಬಾಳುತ್ತಿರುವವವು ಹೆಣ್ಣುಗಳೇ ಎನ್ನುವ ಕಟುಸತ್ಯ ಬಹುಶಃ ನಾವೇ ಶೋಷಿತರು ಎಂದಳುವ ಮಂದಿಗೆ ಕಾಣಿಸುವುದಿಲ್ಲ.

ಕಲ್ಕತ್ತಾ ದೆಹಲಿ, ಮುಂಬೈ, ಮುಂತಾದ ಮಹಾನಗರಗಳಲ್ಲಿ ತಮ್ಮ ದುರ್ಗುಣಗಳಿಂದಾಗಿಯೇ ರೋಗ ಹತ್ತಿಸಿಕೊಂಡ ಮಹಾಪುರುಷರು ಅಪ್ರಾಪ್ತ ಬಾಲಕಿಯರನ್ನೂ ಕೂಡಿದರೆ ತಮ್ಮ ರೋಗ ನಿವಾರಣೆಯಾಗುತ್ತದೆ ಎನ್ನುವ ಹುಂಬ, ಮೂಢನಂಬಿಕೆಯಿಂದ ಸಾವಿರಗಟ್ಟಲೆ ಎಳೆ ಕಂದಮ್ಮಗಳನ್ನು ಬಾಲವಿಧವೆಯರನ್ನಾಗಿಸುತ್ತಿದ್ದಾರಲ್ಲ ಅದನ್ನು ವರ್ಣಿಸಲು ಶೋಷಣೆ ಎನ್ನುವ ಪದವೂ ನವಿರಾಗಿದೆ ಎನಿಸುತ್ತದೆಯಲ್ಲ ಅಥವಾ ನಿಮ್ಮಂಥ ಪುರುಷ ಶ್ರೇಷ್ಠರು ಬಳಸಿ ಈ ಪದ ತನ್ನ ಅರ್ಥವನ್ನೇ ಕಳೆದುಕೊಳ್ಳುತ್ತಿದೆಯೋ ?

ಇನ್ನು ಅತ್ತೆಯ ಉದಾಹರಣೆ ಸಾಕು ಮಾಡಿ. ಅತ್ತೆ ಸೊಸೆಯನ್ನು ಸುಡುತ್ತಿದ್ದರೆ ಗಂಡ ಮತ್ತು ಮಾವಂದಿರೇನು ಕಡುಬು ತಿನ್ನುತ್ತಿರುತ್ತಾರೆಯೇ ? ವರದಕ್ಷಿಣೆ ದಕ್ಕುವುದು ವರನಿಗೆ ಮತ್ತು ಇಡೀ ಕುಟುಂಬಕ್ಕೆ ! ಅದು 'ಅತ್ತೆ ದಕ್ಷಿಣೆ' ಏನೂ ಅಲ್ಲ. 'ಹೆಣ್ಣಿಗೆ ಹೆಣ್ಣೇ ಶತ್ರು' ಎನ್ನುವ (ಪುರುಷ ಶ್ರೇಷ್ಠರಿಂದಲೇ ಸೃಷ್ಟಿಯಾದ) ಈ ಸ್ಲೋಗನ್ನು ಬ್ರಿಟಿಷರಂತೆ 'ಒಡೆದು ಆಳುವ' ನೀತಿ ಅಷ್ಟೇ ! ಇಂಥ ಮಾತುಗಳಿಗೆ ಮರುಳಾಗುವ ಮುಗ್ಧತೆ, ಅಥವಾ ಅದಕ್ಕಿಂತ ಪೆದ್ದುತನವನ್ನು ನಾವೆಂದೋ ದಾಟಿಬಿಟ್ಟಿದ್ದೇವೆ.

ಮಹಿಳಾ ಕಾರ್ಯಕ್ರಮಗಳನ್ನು ಏರ್ಪಡಿಸುವವರಲ್ಲಿ ಒಂದು ವಿನಂತಿ. ಇನ್ನು ಮಹಿಳೆಯರ ಸಂಕಷ್ಟಕ್ಕಾಗಲೀ, ಕಾರ್ಯಕ್ರಮಕ್ಕಾಗಲೀ ಇಂಥಾ ಪುರುಷ ಶ್ರೇಷ್ಠರನ್ನು ದಯವಿಟ್ಟು ಆಹ್ವಾನಿಸಬೇಡಿ. ಸಾಕು ಇಂಥ ಸವಕಲು ಮತ್ತು ಹಳಸಿದ ಮಾತುಗಳನ್ನು ಕೇಳುವುದು ನಾವು. ಇಂಥ ಮಹಾ ಮಹಿಮರಿಗೆ ಹೇಳುವುದು ಒಂದೇ ಮಾತು

''ಬಿಟ್ಟುಬಿಡಿ ನಮ್ಮಷ್ಟಕ್ಕೆ ನಮ್ಮನ್ನು
ಬದುಕುತ್ತೇವೆ ದೃಢವಾಗಿ
ಬೆಳೆಯುತ್ತೇವೆ ಬಲ್ಲಿದರಾಗಿ
ಬರೆಯುತ್ತೇವೆ ಗಟ್ಟಿಯಾಗಿ''

-ಶತಭಿಷಾ

ಬೇಟೆ

ಮೂಲಭೂತವಾದವೇ
ಬುಗಿಲೆದ್ದ ಬೆಂಕೀ
ಯೋಧನಾಗಿ ಅಲ್ಲದವನ
ಅಲ್ಪತನದ ಸ್ವಾರ್ಥ
ಸುಡುತ್ತಿರುವ ಮನದೊಳಗೆ
ಎದ್ದಿರುವಂತ ಈ ಯುದ್ಧ....
ಗಡಿ ಕಾಯದ ಅನ್ನ ಆಹಾರಕ್ಕೂ
ಹಾಹಾಕಾರವಿರದ
ಇಂದಿನ ಯುದ್ಧ
ಮೌಢ್ಯದೊಳ ಉಗ್ರರೂಪ
ಪಾಶವೀಯ
ಕರ್ಮ ಕತ್ತುಗಳ ಬೇಟೆಯ
ಅಟ್ಟಹಾಸದ ಯುದ್ಧ;
''ವಿಶ್ವಮಾನವ ಪ್ರೀತಿ
ಧರ್ಮದ ರೀತಿ''
ದಳ್ಳುರಿಗೆ ಆಹುತಿಯಾದದ್ದು ಭೀತಿ
ಶತಮಾನದ ಹೊಸ್ತಿಲೊಳಗೆ
ಹೊತ್ತಿರುವ ಈ ಕಿಡಿಗೆ
ಬಂಡೇಳುವವರ
ಗಂಟಲೊತ್ತುವ - ಯುದ್ಧ
ಕೊಳೆಯಲಾಗದ ಕಾಡ್ಗಿಚ್ಚು?!

ರಜಿಯಾ. ಡಿ.ಬಿ

ಸೃಷ್ಟಿ

ಎಷ್ಟೊಂದು ಜಂಜಾಟ
ಕತ್ತಲಲ್ಲಿ...ಜೊತೆ ಜೊತೆಗೆ
ಬೆಳಕಿನ ಕನಸ್ಸು ಕಾಣುವುದು
ಇದೆಲ್ಲವೂ ಬದುಕೇ ತಾನೆ?!
ನಿನ್ನಮ್ಮನಿಗೆ ಉಡಿತುಂಬಲಿಲ್ಲಾ
ಒಡಲು ತುಂಬಿದಾ ''ನಿನ್ನ ಸೀಮಂತ''
ಅವಳ ಕಾಯ್ತು!
ಹೌದು ಮಗೂ - ನಾಡಿನಲ್ಲಿದ್ದೂ -
ಕಾಡಂತೆ, ಕಳೆದವಳು;
ಗುಹಾಂತರಾಳದೊಳಗೆ ಏಕಾಕಿತನದ
ಕಗ್ಗತ್ತಲೆ....
ಕೆಚ್ಚೆದೆ ಹೊತ್ತ ಧೀರೆ ದಿಟ್ಟೆ
ನಿನ್ನ ಮಗುವಿನಾ ಬೆಳದಿಂಗಳಿಗೆ
ಕಾದವಳು
ವ್ಯರ್ಥವಾಗಿಸಲಿಲ್ಲಾ ಅವಳಾಪೇಕ್ಷೆ
ಗುರುಪೂರ್ಣಿಮೆಯಂದೇ ಬಂದೆ
ಬವಣೆಗಳ ದೂರತಳ್ಳಿ
''ತಿಳಿನೀರಿನಂತೆ ಮನಗಳ
ತನಿಗೊಳಿಸಿ''
ಮಡಿಲು ತುಂಬಾ ಜಾಜಿ
ಗುಲಾಬಿ-ಸಂಪಿಗೆ
ನಿನ್ನ ನಗೆಯ ನೋಟ
ಅರಳಿ ಬೆಳಗಾಗುವುದಕ್ಕೆ
ನೀನು ಬಂದೆ - ಜೀವ ತಂದೆ

ರಜಿಯಾ. ಡಿ. ಬಿ.

ಅಡುಗೆ ಮನೆಯಲ್ಲಿ ಅಷ್ಟಾವಧಾನ

1. ಬೇಯುತ್ತಿರುವ ತರಕಾರಿ ಬೇಳೆಗಳು
ಮಸಾಲೆಗಳ ಬೇಡುತಿವೆ; ಎಲ್ಲರ
ರುಚಿಗೆ ತಕ್ಕಂತೆ ಹದಗೊಳಿಸುವ ತವಕ
2. ರೂಮಿನಲಿ ಮಾವನವರು ಮಾತ್ರೆ ನುಂಗುವ
ಸಮಯ; 'ಯಾವ ಮಾತ್ರೆ ಕೊಡಬೇಕೀಗ?'
ತಲೆಯಲ್ಲಿ ನೆನಪಿನಾ ಮಿಂಚುಗಳು.
3. ಪುಟ್ಟ ಮಗು ಪಡಸಾಲೆಯಲ್ಲಿ ಕುಳಿತು
ಹೋಂವರ್ಕ್‌ಗೆ ತಿಣುಕಾಡುತಿದೆ; ಅಡುಗೆ
ಮನೆಯಿಂದಲೇ ಸಲಹೆ ಸೂಚನೆಗಳು
4. ಮಿಂದು ಬರುವ ಗಂಡನಿಗೆ ತಿಂಡಿ ಒದಗಿಸ
ಬೇಕಲ್ಲ ಟೇಬಲ್ಲಿಗೆ । ಹಾಳು ಇಡ್ಲಿಗೆ
ಬೇಯುವುದಕೆ ಐದು ನಿಮಿಷಗಳೇಕೆ?
5. ನಿನ್ನೆಯ ಯಾವ ಮಾತಿಗೆ ಅತ್ತೆ ಮುಖ
ಬೆಳಗಿನಿಂದಲೇ ಊದಿಕೊಂಡಿದೆಯಲ್ಲ?
6. ಮೈದುನನ ಜಾತಕಕೆ ಹುಡುಗಿ ಹೊಂದಿಸಬೇಕು
7. ನಾದಿನಿಗೆ ಈ ಬಾರಿ ಸೀರೆಯೇ ಉಡುಗೊರೆ
8. ಅಯ್ಯೋ ಆಫೀಸಿಗೆ ತಡವಾಗಿಯೇ ಹೋಯಿತಲ್ಲ
ಬಾಸ್‌ನ ವ್ಯಂಗ್ಯ ನಗು ಕಣ್ಣ ಮುಂದೆ!
ಪ್ರತಿನಿತ್ಯ ಅಡುಗೆ ಕೋಣೆಯಲಿ ಇವಳ
ಅಷ್ಟಾವಧಾನಗಳು! ಬರಿ ಅಷ್ಟವೇ ಏಕೆ? ನೂರು
ಸಾವಿರ ಕೋಟಿ ವ್ಯವಧರಿಸುವ ಅವಧಾನಗಳು
ದಾಖಲಾಗುವುದಿಲ್ಲ ಎಲ್ಲಾ ವೇದಿಕೆಯ ಹಂಗಿಲ್ಲ
ಇತಿಹಾಸದೊಳಗೊಂದು ಸೃಷ್ಟಿಯಾಗುತ್ತದೆ
ಬರಿ ಶೂನ್ಯ! ಈ ಬೆಲೆಯಿರದ ಕಾರ್ಯಕೆ
ಜಗ ಕೊಡುವ ನಿಷ್ಕಾಳಜಿಯ ನಿಸ್ಸಾರ ಖಿಲ್ಲತ್ತು
ಇದು ಏನುಮಹಾ; ಬರಿ ಅಡುಗೆ ಮನೆ ಬಾಬತ್ತು!!

ಶಾಂತಾ ನಾಗರಾಜ್

ನೀವು ಓದಬೇಕಾದ ಪುಸ್ತಕ

ಪುಸ್ತಕ : ಬದುಕು ಕೊಟ್ಟಿದ್ದು-ಕಲಿಸಿದ್ದು (ಆತ್ಮಕಥನ)
ಶಾರದಾ ಹೆಮ್ಮಿಗೆ
ನೆಲಮನೆ ಪ್ರಕಾಶನ
ರೂ. 45/-

ಕನ್ನಡದಲ್ಲಿ ಮಹಿಳೆಯರು ಆತ್ಮಕಥನವನ್ನು ಬರೆದಿರುವುದು ಅಪರೂಪ. ಅನುಪಮಾ ನಿರಂಜನರ 'ನೆನಪು ಸಿಹಿ-ಕಹಿ' ಬಿಟ್ಟರೆ, ನನಗೆ ಬೇರೊಂದು ಪುಸ್ತಕ ನೆನಪಾಗುತ್ತಿಲ್ಲ. ಇಂಥಾ ಅಪರೂಪದ ಕೆಲಸವನ್ನು ಮಾಡಿರುವವರು ಶ್ರೀಮತಿ ಶಾರದಾ ಹೆಮ್ಮಿಗೆ. ಕೆಲವು ತಿಂಗಳುಗಳ ಹಿಂದೆ ತಮ್ಮ 73ನೇ ವಯಸ್ಸಿನಲ್ಲಿ ತೀರಿಕೊಂಡ ಶ್ರೀಮತಿ ಶಾರದಾ ಹೆಮ್ಮಿಗೆಯವರ ಆತ್ಮಕಥೆ, ಒಂದು ಪೀಳಿಗೆಯ ಹಿಂದಿನ ಹೆಣ್ಣುಮಕ್ಕಳ ಬದುಕಿಗೆ ಸದ್ದಿಲ್ಲದೆ ಕನ್ನಡಿ ಹಿಡಿಯುತ್ತದೆ. ತಮ್ಮ ಬದುಕಿನ ಪುಟಗಳನ್ನು ನಿರುದ್ವಿಗ್ನವಾಗಿ ತೆರೆದಿಡುವ ಅವರ ಪರಿಯೇ ಬೆರಗುಗೊಳಿಸುವಂಥಹುದು. ಬಡತನದ ಕುಟುಂಬದಲ್ಲಿ ಹುಟ್ಟಿದ ಹೆಣ್ಣು ಮಗಳಿಗೆ, ಹೆಚ್ಚು ಓದುವ ಅವಕಾಶವಾಗಲಿ, ಆರ್ಥಿಕ ಸ್ವಾತಂತ್ರವಾಗಲಿ ಇಲ್ಲದೆ, ತಾನು ಬಯಸದ ಗಂಡನ್ನು ಮದುವೆಯಾಗಲೇಬೇಕಾದ ಅನಿವಾರ್ಯದ ಬದುಕನ್ನು ಯಾವುದೇ ಸ್ವಯಂಮರುಕ, ಆತ್ಮತ್ಯಾಗ ಇಲ್ಲವೇ ಹುತಾತ್ಮ ವರಸೆ ಇಲ್ಲದೆ ಹೇಳಿ ಮುಗಿಸುತ್ತಾರೆ. ತಮ್ಮ ಕಾಲದ ಸಾಮಾನ್ಯ ಹೆಣ್ಣು ಮಕ್ಕಳ ಪಾಡನ್ನು ತೆರೆದಿಡುತ್ತಾರೆ. 'ಬದುಕು ಕೊಟ್ಟದ್ದನ್ನು' ದೂರಿಲ್ಲದೆ ಸ್ವೀಕರಿಸಿದ ಬದುಕು ಇವರದು. 'ಸ್ವೀಕರಿಸದೆ ಬೇರೆ ಮಾರ್ಗವಿರಲಿಲ್ಲ' ಎಂದು ಅಷ್ಟೇ ನಿರ್ಭಾವುಕವಾಗಿ ವಾಸ್ತವದ ಪುಟಪುಟಗಳನ್ನು ತಿರುವಿ ಹಾಕುತ್ತಾರೆ.

ಸಣ್ಣ ಹಳ್ಳಿಯಲ್ಲಿ ಹುಟ್ಟಿದ ಎಳೆಯ ಹುಡುಗಿ ಚಿಕ್ಕ ವಯಸ್ಸಿಗೇ ಅಕ್ಕನ ಮನೆಯ ಚಾಕರಿಗೆ ತೆರಳುತ್ತದೆ. ಬೇಡಿದರೂ, ಕಾಡಿದರೂ, ತನ್ನತ್ತ ನಿರ್ಭಾವುಕವಾಗಿಯೇ ಉಳಿದ ಅಮ್ಮನ ಬಗ್ಗೆ ಆಕೆಯಲ್ಲಿ ಮೂಡುವ ಪ್ರಶ್ನೆಗಳಿಗೆ ಉತ್ತರಗಳಿರುವುದಿಲ್ಲ. ಮಾತೃತ್ವದ ಮಿತ್‌ಗಳನ್ನು ಒಂದೊಂದಾಗಿ ಒಡೆಯುತ್ತಾರೆ. ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ಭೇದ ಮಾಡುವ ಅಮ್ಮ, ಅರೆಹೊಟ್ಟೆಯ ಸಣ್ಣ ಮಕ್ಕಳನ್ನು ಎದುರಿಗಿಟ್ಟುಕೊಂಡು ಹಾಲು, ಹಣ್ಣು, ಮೊಸರು ಎಲ್ಲವನ್ನೂ ತಾವೊಬ್ಬರೇ ಸಮೃದ್ಧವಾಗಿ ಮೇಯುವ ಅತ್ತೆ - ಈ ಎಲ್ಲ ಪಾತ್ರಗಳಲ್ಲಿ ಬದುಕಿನ ಅದೆಷ್ಟೋ ಕಂಡೂ ಕಾಣದಂತೆ ಮರೆಯಾಗುವ ಮುಖಗಳನ್ನು ಹಿಡಿದಿಟ್ಟಿದ್ದಾರೆ.

ಬಡತನದಲ್ಲಿ ಬೆಳೆದ ಈ ಹುಡುಗಿಗೆ ಹೆಚ್ಚು ಓದುವ ಅವಕಾಶವಿರಲಿಲ್ಲ, ಸರಿಯಾದ ಗಂಡನ್ನು ಹುಡುಕಿ, ಕೊಟ್ಟು ಮಾಡಿ ಮದುವೆ ಮಾಡುವ ತಾಕತ್ತಿರಲಿಲ್ಲ. ಹದಿನೈದು ವರ್ಷ ಸಂಸಾರ ಮಾಡಿದ್ದ, ಮೂರು ಮಕ್ಕಳ ತಂದೆಯನ್ನು ವರವಾಗಿ ಒಪ್ಪಿಕೊಳ್ಳುವ ಅನಿವಾರ್ಯ ಅಕ್ಕನದಾದರೆ, ಗಂಡ ಬಿಟ್ಟು ಬಂದ ಭಾಗೀರತಿಯ ಸಹವಾಸ ಮಾಡಿ ಹಳ್ಳಿಯ ತುಂಬ ಗೇಲಿಯ ವಸ್ತುವಾದ ರಂಗಣ್ಣನನ್ನು ಮದುವೆಯಾಗಲೇ ಬೇಕಾದ ಅನಿವಾರ್ಯ ಇವರದು. ಒಮ್ಮೆ ಮದುವೆಯಾದ ಮೇಲೆ, ಕರೆಯುವ ತವರಾಗಲಿ, ಹೇಳಿ ಕೇಳುವ ನೆಂಟರಾಗಲಿ ಇಲ್ಲದ ತಾನು ಬದುಕು ಕೊಟ್ಟದ್ದನ್ನೆ ಕಹಿಯಿಲ್ಲದೆ ಒಪ್ಪಿ ಬದುಕಬೇಕೆಂದು ಅರಿಯುತ್ತಾರೆ. ಆರ್ಥಿಕವಾಗಿ ಗಂಡನ ಮೇಲೆ ಅವಲಂಬಿತಳಿರುವ ಹೆಣ್ಣಿಗೆ ಎಲ್ಲವನ್ನೂ ಸಹಿಸಬೇಕಾದ ಅನಿವಾರ್ಯವನ್ನು ಪುಟ ಪುಟಗಳಲ್ಲಿ ತೆರೆದಿಡುತ್ತಾರೆ. ಈ ಪುಸ್ತಕದ ಮಹತ್ವ ಇರುವುದು ಅವರು ಅವರ ಕಾಲದ ಹೆಣ್ಣುಮಕ್ಕಳ ಆಯ್ಕೆ ಇಲ್ಲದ, ಆರ್ಥಿಕ ಅವಲಂಬಿತ ಬದುಕಿನ ಅನಿವಾರ್ಯಗಳನ್ನು ಬಿಚ್ಚಿಡುವ ಬಗೆಯಲ್ಲಿ. ಅವುಗಳನ್ನು ಆದರ್ಶವಾಗಿಸಿ, ಸತೀತ್ವಕ್ಕೇರಿಸಿ ವೈಭವೀಕರಿಸುವುದಿಲ್ಲ. ತಮ್ಮ ಪಾಲಿಗೆ ಬಂದದ್ದನ್ನೇ ತಾವು ಬಯಸಿದ್ದು ಎಂಬ ಆತ್ಮವಂಚನೆಗೆ ಹೋಗುವುದಿಲ್ಲ. ತಮ್ಮ ಪಾಲಿಗೆ ಬಂದದ್ದನ್ನು ಒಲ್ಲೆ ಎನ್ನುವ ಸ್ವಾತಂತ್ರ ತನಗಿರಲಿಲ್ಲ ಎಂದು ಸ್ಪಷ್ಟಪಡಿಸುತ್ತಾರೆ. ಇದು ಅನಿವಾರ್ಯದ ಬದುಕು, ಆಯ್ಕೆ ಇಲ್ಲದ ಬದುಕು ಎಂದು ಗುರುತಿಸಿಕೊಳ್ಳುತ್ತಲೇ, 'ನನ್ನ ಹೆಣ್ಣು ಮಕ್ಕಳು ಓದಬೇಕು, ನನ್ನ ಬದುಕಿನ ಬಾಧೆಗಳು ಅವರನ್ನು ಕಾಡಬಾರದು, ನನಗೆ ದಕ್ಕದೆ ಹೋದ ಬದುಕಿನ ಅವಕಾಶಗಳನ್ನು ನನ್ನ ಮಕ್ಕಳಿಗೆ ನೀಡಬೇಕು' ಎಂಬ ಪ್ರಜ್ಞಾವಂತ ಎಚ್ಚರದಲ್ಲಿ ಬರೆಯುತ್ತಾರೆ.

ಒಂದು ಕ್ಷಣ, ಕೇವಲ ಒಂದು ಪೀಳಿಗೆಯಷ್ಟು ಹಿಂದಿನ ಈ ಮಹಿಳೆಯ ಬದುಕು ಮತ್ತು ಬದುಕಿನತ್ತಲ ನಿರೀಕ್ಷೆಗಳು ನಮ್ಮ ಕಾಲಕ್ಕಿಂತ ಅದೆಷ್ಟು ಭಿನ್ನವಿತ್ತು ಎಂದು ಅಚ್ಚರಿಯಾಗುತ್ತದೆ. ಇಂದು ವಿದ್ಯಾವಂತ ಹೆಣ್ಣು ಮಕ್ಕಳು ಪತಿಯಲ್ಲಿ ಏನೆಲ್ಲವನ್ನು ನಿರೀಕ್ಷಿಸುತ್ತಾರೆ. ತಮಗೆ ಜೊತೆ ನಿಲ್ಲುವ ಜೀವನ ಸಂಗಾತಿಯನ್ನು, ಮಕ್ಕಳ ಲಾಲನೆ ಪಾಲನೆಯಲ್ಲಿ ನೆರವಾಗುವ ಪ್ರೀತಿಯ ಅಪ್ಪನನ್ನು, ಏನೆಲ್ಲವನ್ನು ಕೇಳಬಲ್ಲ ಸ್ಥಿತಿಯಲ್ಲಿ ನಾವಿದ್ದೇವೆ. ಆದರೆ ಶಾರದಾರ ಕತೆಯೇ ಬೇರೆ. ಮಕ್ಕಳ ನಡುವೆ ಅಂತರ ಇಟ್ಟುಕೊಳ್ಳಬೇಕೆಂದರೂ ಹೇಗೆಂದು ತಿಳಿಯದಿದ್ದ ಕಾಲದಲ್ಲಿ, ಅಂತರವೇ ಇಲ್ಲದಂತೆ ಹುಟ್ಟಿದ ಐದು ಪುಟ್ಟ ಪುಟ್ಟ ಮಕ್ಕಳ ನಡುವೆ, ಮನೆ ಕೆಲಸವನ್ನೆಲ್ಲ ಮಾಡಿಕೊಂಡು ಹೆಣಗುವಾಗ, ಮಗು ಅತ್ತರೆ ಸಮಾಧಾನ ಮಾಡುವುದಿರಲಿ, ಕಿರಿ ಕಿರಿಗೊಂಡು ಹೊರಗೆ ಹೋಗಿ ಬಿಡುವ ಗಂಡನ ಚಿತ್ರವನ್ನು ಇಲ್ಲಿ ಕಾಣುತ್ತೇವೆ. ಆ ಗಂಡನಿಗೆ 'ಮಕ್ಕಳ ಬಗ್ಗೆ

ದ್ವೇಷವಿರಲಿಲ್ಲ' ಎಂಬುದೇ ದೊಡ್ಡ ಸಮಾಧಾನದ ವಿಷಯವಾಗುತ್ತದೆ ಈ ಗೃಹಿಣಿಗೆ! ಗಂಡನಿಂದ 'ತಂದು ಹಾಕುವ' ಏಕ ಕರ್ತವ್ಯದಾಚೆ ಮತ್ತೇನನ್ನೂ ನಿರೀಕ್ಷಿಸಲೂ ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಈಕೆ ಇದ್ದರು.

ಈ ಆತ್ಮಕಥನ ವಿಶಿಷ್ಟವೆನಿಸುವುದು, ಆ ಕಾಲದ ಹೆಣ್ಣು ಮಕ್ಕಳ ಪಾತ್ರಗಳು ಪುಟ್ಟ ಪುಟ್ಟದಾಗಿಯೇ ತೆರೆದುಕೊಳ್ಳುವ ಪರಿಯಲ್ಲಿ. ಹೆಣ್ಣಿನ ಬದುಕು ಹಿರಿಯ ಸಾಹಿತಿಗಳ ಕೃತಿಗಳಲ್ಲಿ ಬಹಳಷ್ಟು ಬಿತ್ತರವಾಗಿರುವುದುಂಟು. ಆದರೆ ಇಲ್ಲಿ ಗಮನಿಸಬೇಕಾದ್ದು, ಈ ಹೆಣ್ಣುಮಕ್ಕಳು ಅಂತರಂಗದಿಂದ ಕತೆ ಹೇಳುತ್ತಾರೆ. ತಮ್ಮ ಕತೆಯನ್ನು, ತಮ್ಮ ಸೋದರಿಯರ ಕತೆಯನ್ನು, ತಮ್ಮ ಗೆಳತಿಯರ ಕತೆಯನ್ನು, ತಾವು ಕಂಡ ಸಣ್ಣ ಹಳ್ಳಿಯ ಹೆಂಗಳೆಯರ ಕತೆಯನ್ನು. ಅಪ್ಪಟ ಆಚಾರವಂತರ ಮನೆಯಲ್ಲೂ ಗಂಡ ಬಿಟ್ಟು ಬಂದ ಮಗಳು, ಕಂಡ ಕಂಡ ಗಂಡುಗಳೊಡನೆ ಅತಿಕಾಮದಲ್ಲಿ ತೊಡಗುತ್ತಾಳೆ. ತಮ್ಮ ವೃದ್ಧಾಪ್ಯದ ಅನಿವಾರ್ಯದಲ್ಲಿ ಹಿರಿಯರು ಮೌನವಾಗಿ ಇದನ್ನು ಸಹಿಸಿಕೊಳ್ಳುತ್ತಾರೆ. ಗಂಡ ಹೊರಗೆ ಕುಳಿತಂತೆಯೇ, ಗಂಡನ ಬಾಸ್ ಒಳಗೆ ಹೆಂಡತಿಯ ಶೀಲಹರಣ ಮಾಡುತ್ತಾನೆ. ಎಲ್ಲ ಕಾಲದಲ್ಲೂ ಸದ್ದಿಲ್ಲದೆಯೇ, ಸುದ್ದಿಯಾಗದೆಯೇ ನಡೆದು ಹೋದ ಎಷ್ಟೋ ಘಟನೆಗಳನ್ನು ಮಡಿವಂತಿಕೆ ಇಲ್ಲದೆ ತೆರೆದಿಡುತ್ತಾರೆ.

ಆತ್ಮಕಥನಗಳಲ್ಲಿ ಸಾಮಾನ್ಯವಾಗಿ ನುಸುಳಿಬಿಡುವ ತಮ್ಮ ಪಾತ್ರವನ್ನು ಸೂಕ್ಷ್ಮವಾಗಿ ವೈಭವೀಕರಣವಾಗಲಿ, ಹೀನಾಯವೆನಿಸಿದ ಘಟನೆಗಳನ್ನು ತೇಲಿಸುವುದಾಗಲಿ ಇಲ್ಲಿ ಕಂಡು ಬರುವುದಿಲ್ಲ. 'ಬದುಕು ಕೊಟ್ಟದ್ದು-ಕಲಿಸಿದ್ದು ಇಷ್ಟು ನೋಡಿ' ಎಂದು ಇದ್ದದ್ದನ್ನು ಇದ್ದಂತೆ ಎದುರಿಗಿಟ್ಟು ನಿರ್ಲಿಪ್ತ ಕುಳಿತ ಲೇಖಕಿ ಈಕೆ. ತಮ್ಮ ಪತಿಯ ಪಾತ್ರದ ಹಿನ್ನೆಲೆಯಲ್ಲಿ ಮುಚ್ಚುಮರೆಯಿಲ್ಲದೆ ತೆರೆದಿಡುತ್ತಾರೆ. ಹಾಗೆಂದು ತಮ್ಮ ಗಂಡ ಮತ್ತು ಭಾಗೀರತಿಯ ಸಂಬಂಧವನ್ನು ರೋಚಕಗೊಳಿಸುವ ಉದ್ದೇಶವೂ ಇಲ್ಲಿಲ್ಲ. ಆತನ ವರ್ತನೆಗಳನ್ನು ಸಮರ್ಥಿಸಲೂ ಹೋಗುವುದಿಲ್ಲ, ಆ ಕಾರಣಕ್ಕೆ ಆತನನ್ನು ತಳಕ್ಕೂ ಹಾಕುವುದಿಲ್ಲ. ಇದ್ದದ್ದನ್ನು ಇದ್ದಂತೆ ಬಿಚ್ಚಿ ಬೆತ್ತಲಾಗಿಸಿದರೂ, ಅದು ಕೇವಲ ವಾಸ್ತವ ತಿಳಿಸುವ ಉದ್ದೇಶದ್ದಾಗಿದೆ.

ಆದರೆ 70 ದಾಟಿದ ಮಹಿಳೆಯ ಈ ಆತ್ಮಕಥನ, ಆಕೆಯ ಇಪ್ಪತ್ತರ ಹರಯದ ಬಳಿಯೆಲ್ಲೋ ಮಕ್ಕಳು ಹುಟ್ಟಿದ ಸ್ವಲ್ಪ ಸಮಯಕ್ಕೇ, ಗಕ್ಕನೆ ನಿಂತು ಬಿಡುತ್ತದೆ. ತಮ್ಮ ಮಕ್ಕಳನ್ನು ತಾವು ಕನಸು ಕಂಡಂತೆ, ಅವರ ಕಾಲ ಮೇಲೆ ನಿಲ್ಲುವಂತೆ ಮಾಡಿದ ಹೋರಾಟದ ಬದುಕಿನ ಮುಂದಿನ ಅಧ್ಯಾಯವನ್ನು ಇಲ್ಲಿ ವಿವರಿಸಲು ಹೋಗಿಲ್ಲ. ಬಹುಶಃ 'ಬರೆಯಬಲ್ಲ' ಮಕ್ಕಳೇ ಬರೆಯಲೆಂದು ಬಿಟ್ಟು ಹೋಗಿರಬಹುದು.

ಈ ಆತ್ಮಕಥನ ಓರ್ವ ಸಾಮಾನ್ಯ ಹೆಣ್ಣು ಮಗಳ ಕತೆಯಾಗಿ ಮುಗಿದಿಲ್ಲ, ತನ್ನ ಕಾಲದ ಹೆಣ್ಣು ಮಕ್ಕಳೆಲ್ಲರ ಕತೆಯನ್ನು ಹೇಳುವಂತಿದೆ. ಇಂದು ಕೂಡಾ ಅವಕಾಶವಿಲ್ಲದೆಯೋ, ಅವಕಾಶವಿದ್ದೂ 'ಯಾರು ಓದುತ್ತಾರೆ, ಕೆಲಸ ಮಾಡುತ್ತಾರೆ' ಎಂಬ ಉದಾಸೀನದಲ್ಲಿ ಮದುವೆಯನ್ನೇ ತಮ್ಮ ಭವಿಷ್ಯವೆಂದು ನಂಬಿ ವಿವಾಹವಾಗುವ, ಆರ್ಥಿಕವಾಗಿ ಅಸ್ವತಂತ್ರ ಹೆಣ್ಣು ಮಕ್ಕಳಿಗೆ ಎಚ್ಚರದ ಕತೆಯಂತಿದೆ.

❑

ನ್ಯಾಯಾಧೀಶರಿಗೆ ಬಹಿಷ್ಕಾರ !

ಬೊಲಿವಿಯಾದಲ್ಲಿ 12 ವರ್ಷದ ಹುಡುಗಿ ಮಲತಂದೆಯ ಅತ್ಯಾಚಾರದ ಫಲವಾಗಿ ಗರ್ಭಿಣಿಯಾಗಿದ್ದಾಳೆ. ಈ ಹೆಣ್ಣು ಮಗುವಿಗೆ ಗರ್ಭಪಾತ ಮಾಡಿಸಲು ಅನುಮತಿ ಕೊಟ್ಟ ನ್ಯಾಯಾಧೀಶರಿಗೆ ಬಹಿಷ್ಕಾರ ಹಾಕುವಂತೆ ಸ್ಥಳೀಯ ಚರ್ಚಿನ ಮುಖಂಡರು ಕೂಗುತ್ತಿದ್ದಾರೆ. ಗರ್ಭಪಾತ ಅಪರಾಧ, ಬಹಿಷಾಕಾರವೇ ತಕ್ಕ ಶಿಕ್ಷೆ ಎನ್ನುವ ಈ ಜನ, ಹುಟ್ಟುವ ಕೂಸಿಗಿಂತ ಬದುಕಿರುವ 12 ವರ್ಷದ ಕೂಸಿನ ಜೀವ ಮುಖ್ಯ ಎಂದು ಯೋಚಿಸಿದಂತಿಲ್ಲ. ಅತ್ಯಾಚಾರಿಗೇ ಬಹಿಷ್ಕಾರ ಹಾಕುವ ಬದಲು, ನ್ಯಾಯಾಧೀಶರಿಗೇ ಬಹಿಷ್ಕಾರ ಹಾಕಲು ಹೊರಟಿದ್ದಾರೆ ! ಎಂತಹ ಸಾಮಾಜಿಕ ನ್ಯಾಯ !

ಸುಸಂಸ್ಕೃತ (!) ಮಹಿಳೆಯರಿಂದ ಗೂಂಡಾಗಿರಿ

ದ್ವಾಪರಯುಗದಲ್ಲಿ ದುಶ್ಯಾಸನ ತುಂಬಿದ ಸಭೆಯಲ್ಲಿ ದ್ರೌಪದಿಯ ಸೀರೆ ಎಳೆದ. ಕಲಿಯುಗದಲ್ಲಿ ಭಾರತೀಯ ಸಂಸ್ಕೃತಿಯ ಕಾವಲುಸೇನೆ ನಡುಬೀದಿಯಲ್ಲಿ ಮತ್ತೊಬ್ಬ ಹೆಣ್ಣಿನ ಸೀರೆ ಹರಿದು ಎಳೆದು ಹಾಕಿದೆ. ಮಾರ್ಚ್ 16, ಶಿವಸೇನೆಯ ಮಹಿಳಾ ಕಾರ್ಪೊರೇಟರುಗಳು ಮತ್ತೊಬ್ಬ ಮಹಿಳೆ ಸಮಾಜವಾದಿ ಪಾರ್ಟಿಯ ಅನ್ಸಾರಿಯ ವಸ್ತ್ರಾಪಹರಣ ಮಾಡಿದ ಘಟನೆ ವರದಿಯಾಗಿದೆ. ಅನ್ಸಾರಿಯವರು ಬಾಳಠಾಕರೆಯ ವಿರುದ್ಧ ಮಾತನಾಡಿದರೆಂಬ ಒಂದೇ ಕಾರಣಕ್ಕೆ ಶಿವಸೇನೆಯ ಮಹಿಳಾ ಕಾರ್ಪೊರೇಟರ್‌ಗಳು ಆಕೆಯ ಮೇಲೆ ಹಾರಿ ಬಿದ್ದು, ಆಕೆಯ ಸೀರೆ ಹರಿದು ಬಿಸಾಡಿ, ಆಕೆಯ ಕೊರಳು ಹಿಸುಕಲು ಪ್ರಯತ್ನಿಸಿದರು. ಮೇಯರ್ ಮತ್ತು ಆಳುವ ಪಕ್ಷದ ಮುಖಂಡರು ತುಟಿಪಿಟಕ್ಕೆನ್ನದೆ ಕುಳಿತಿದ್ದರು. ಆದರೆ ಅನ್ಸಾರಿಗೆ ಸಹಾಯ ಮಾಡದಂತೆ ಅಡ್ಡಕಟ್ಟಿ ನಿಂತವರನ್ನು ನೂಕಿ ಮೊಹದ್ದೀನ್ ಹೈದರ್ ಮತ್ತು ಸಲೀಂಬೇಗ್ ಸಮಯಕ್ಕೆ ಧಾವಿಸಿ ಈ ಕೃತ್ಯವನ್ನು ತಡೆಯದಿದ್ದರೆ ಅನ್ಸಾರಿಯವರ ಕತೆ ಅಲ್ಲಿಗೇ ಮುಗಿಯುತ್ತಿತ್ತು. ಭಾರತೀಯ ಸಂಸ್ಕೃತಿಯ ಗುತ್ತಿಗೆ ಪಡೆದ ಈ ಸುಸಂಸ್ಕೃತ ಹೆಂಗಸರು ಮತ್ತೊಬ್ಬ ಹೆಂಗಸಿನ ಮಾನ ಮತ್ತು ಪ್ರಾಣಹರಣಕ್ಕೂ ಸಿದ್ಧರಾದದ್ದು ಈ ದೇಶದ ದುರಂತವೇ ಸರಿ !

ಬಾಳೆಕುಂದ್ರಿಯಲ್ಲಿ ಪೈಶಾಚಿಕ ಘಟನೆ

ಬೆಳಗಾವಿ ನಗರದಿಂದ ಕೇವಲ 10 ಕಿಲೋಮೀಟರ್ ದೂರದಲ್ಲಿ ಪಂತಬಾಳೇಕುಂದ್ರಿಯೆಂಬ ಗ್ರಾಮವಿದೆ. ಈ ಗ್ರಾಮದಲ್ಲಿ ಕಳೆದವಾರ ಇಬ್ಬರು ಹೆಣ್ಣುಮಕ್ಕಳನ್ನು ರಸ್ತೆಗೆ ಎಳೆದು ತಂದು ಹೊಡೆದು ತಲೆ ಬೋಳಿಸಿದ ಹೇಯಕೃತ್ಯ ನಡೆದಿದೆ. ಈ ಕೃತ್ಯ ಎಸಗಿದವನು ಪ್ರಜಾಪ್ರಭುತ್ವದ ರಾಜಕೀಯ ವ್ಯವಸ್ಥೆಯ ಗ್ರಾಮ ಪಂಚಾಯತ್ ಅಧ್ಯಕ್ಷನಾದ ಮಜೀದ್ ಜಮಾದಾರ್ ಹಾಗೂ ಆತನ 15 ಜನ ಗೂಂಡಾ ಪಡೆ.

ಪಂತ ಬಾಳೇಕುಂದ್ರಿ ಗ್ರಾಮದ ಮುನೀರಾ ಆಲವಾಡಕರ ಹಾಗೂ ಮಮತಾಜ ಜಮಾದಾರ್, ಇಬ್ಬರು ವಿವಾಹಿತ ಹೆಣ್ಣುಮಕ್ಕಳು. 55 ವರ್ಷದ ವಯಸ್ಸಿನ ಗ್ರಾಮಪಂಚಾಯತ್ ಅಧ್ಯಕ್ಷ ಮುಜೀದ್ ಜಮಾದಾರನ ಅನೈತಿಕ ಸಂಬಂಧಗಳ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು ಎಂಬ ಕಾರಣಕ್ಕೆ ಅವರಿಬ್ಬರನ್ನೂ ಬೀದಿಗೆ ಎಳೆತಂದು ಹಸಿಕಬ್ಬಿನಿಂದ ಚಚ್ಚಿ, ಎಳೆದಾಡಿ ತಲೆಬೋಳಿಸಿ ಅಪಮಾನಗೊಳಿಸಿದ್ದಾರೆ.

ಎನ್.ಎಫ್.ಐ.ಡಬ್ಲ್ಯೂನ ಬೆಳಗಾಂವ ಜಿಲ್ಲಾ ಮಂಡಳಿಯು ಈ ಘಟನೆಗೆ ಕಾರಣರಾದ ಆರೋಪಿಗಳನ್ನು ಬಂಧಿಸಿ ಶಿಕ್ಷಿಸಬೇಕೆಂದು ಪ್ರತಿಭಟನಾ ಮೆರವಣಿಗೆ ನಡೆಸಿ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿತು. ಗ್ರಾಮ ಪಂಚಾಯತ್ ಅಧ್ಯಕ್ಷರೂ ಸೇರಿದಂತೆ 4 ಜನರನ್ನು ಪೋಲೀಸರು ಬಂಧಿಸಿದ್ದಾರೆ. ಉಳಿದವರು ತಲೆಮರೆಸಿಕೊಂಡಿದ್ದಾರೆ. ಬಂಧಿತ ಆರೋಪಿಗಳೆಲ್ಲರೂ ಈಗ ನ್ಯಾಯಾಲಯದಿಂದ ಜಾಮೀನು ಪಡೆದು ಹೊರಬಂದು ರಾಜಾರೋಷದಿಂದ ಮೆರೆಯುತ್ತಾ ಹಲ್ಲೆಗೊಳಗಾದ ಕುಟುಂಬವನ್ನು ಬೆದರಿಸುತ್ತಿದ್ದಾರೆ. ಹಲ್ಲೆಗೊಳಗಾದ ಕುಟುಂಬ ಈಗ ಜೀವಭಯದಿಂದ ತತ್ತರಿಸುತ್ತಿದೆ.

ಎಲ್ಲ ಮಾನವಂತರೂ ತಲೆ ತಗ್ಗಿಸುವಂತಹ ಕೃತ್ಯವಿದು. ಪಾಳೇಗಾರಿ ದರ್ಪ ಮತ್ತು ರಾಜಕೀಯ ಬೆಂಬಲದಿಂದ ನಡೆದಿರುವ ಈ ಕೃತ್ಯ ಅತ್ಯಂತ ಗಾಭರಿ ಹುಟ್ಟಿಸುವಂತಹುದು. ಹೆಂಗಸರ ಕೇಶ ಮುಂಡನ ಮಾಡುವ, ಮತ್ತು ಬೆತ್ತಲೆ ಮಾಡಿ ಅಪಮಾನ ಮಾಡುವ ಕೃತ್ಯಗಳು ದಿನೇ ದಿನೇ ಹೆಚ್ಚಾಗುತ್ತಲಿವೆ. ಈ ಸಂದರ್ಭದಲ್ಲಿ ಆರೋಪಿಗಳಿಗೆ ಜಾಮೀನುರಹಿತ ದಸ್ತಗಿರಿ ಮಾಡಿ ಕಠಿಣಕ್ರಮ ಕೈಗೊಳ್ಳುವಂತಾಗಬೇಕು.

ಗುಲಬರ್ಗಾದಲ್ಲಿ ಬೆತ್ತಲೆ ಸೇವೆ

ಗುಲಬರ್ಗಾ ನಗರದ ಶರಣ ಬಸವೇಶ್ವರ ದೇವಾಲಯದ ಕೆರೆಗೆ ಹೊಂದಿಕೊಂಡಿರುವ ಜಗತ್ ಸರ್ಕಲ್‌ನಲ್ಲಿ ಒಂದು ಯಲ್ಲಮ್ಮ ಕಟ್ಟೆ ಇದೆ. ಪ್ರತಿವರ್ಷ ತಳಿರು-ತೋರಣ, ಅರಸಿನ, ಕುಂಕುಮದ ಸಿಂಗಾರ ನಡೆಯುತ್ತದೆ. ಸ್ಥಳೀಯ ಮತ್ತು ಹೊರರಾಜ್ಯದ

ಹಿಂದುಳಿದ ವರ್ಗಕ್ಕೆ ಸೇರಿದ ಮಹಿಳೆಯರು ಬೆತ್ತಲಾಗಿ ಮೈಮೇಲೆ ಬೇವಿನ ಸೊಪ್ಪುಗಳನ್ನು ಕಟ್ಟಿಕೊಂಡು ಡೊಳ್ಳು ಭಜನೆಗಳ ಮೂಲಕ ''ಯಲ್ಲಮ್ಮ ಉಧೊ, ಉಧೊ'' ಎಂಬ ಘೋಷಣೆಗಳೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಪೋಲಿಸ್ ಸಮ್ಮುಖದಲ್ಲಿಯೇ ನೂರಾರು ಮಹಿಳೆಯರು ಮೆರವಣಿಗೆ ನಡೆಸಿದ್ದಾರೆ. ಯಲ್ಲಮ್ಮನ ಕಟ್ಟೆಗೆ ನೂರಾರು ಕುರಿಗಳನ್ನು ಬಲಿಕೊಟ್ಟಿದ್ದಾರೆ. ಇದನ್ನು ತಡೆಯಲು ಹೋದ ನಗರದ ಮಹಿಳಾ ಪೋಲೀಸರಿಗೆ ಯಲ್ಲಮ್ಮನ ಸೇವೆಯಲ್ಲಿ ನಿರತವಾದ ಮಹಿಳೆಯರಿಂದ ಹಲ್ಲೆಗೆ ಒಳಗಾಗಿದ್ದು ಸಹ ಸುದ್ದಿಯಾಗಿದೆ. ಆದರೆ ಸ್ಥಳೀಯ ಪೋಲಿಸ್ ಸೂಪರಿಂಟೆಂಡೆಂಟ್ ಪ್ರತಾಪರೆಡ್ಡಿಯವರು ಬೆತ್ತಲೆ ಸೇವೆ ನಡೆಯಲಿಲ್ಲವೆಂದು ಸಮರ್ಥಿಸಿದ್ದು ಹಸಿಸುಳ್ಳಿನ ಕಂತೆಯಾಗಿದೆ.

ನಿಮಗೆ ಗೊತ್ತಿತ್ತೆ ?

ಜಗತ್ ಪ್ರಸಿದ್ಧ ಪತ್ತೇದಾರಿ ಕಾದಂಬರಿಗಳನ್ನು ಬರೆದ ಅಗಾಥ ಕ್ರಿಸ್ತಿಯ 'ಮೌಸಟ್ರಾಪ್' ಎಂಬ ನಾಟಕ ನಾಲ್ಕು ದಶಕಗಳಿಂದ ಲಂಡನನಲ್ಲಿ ಪ್ರದರ್ಶನವಾಗುತ್ತಿದೆ. ಈಕೆ ಸತ್ತು ಕಾಲು ಶತಮಾನವಾಗುತ್ತಾ ಬಂದಿದ್ದರೂ ಆಕೆಯ ಪುಸ್ತಕಗಳ ಮಾರಾಟ ಕಿಂಚಿತ್ತೂ ತಗ್ಗಿಲ್ಲ. ಬೈಬಲ್ ಒಂದನ್ನು ಹೊರತು ಪಡಿಸಿದರೆ, ಅತ್ಯಧಿಕ ಸಂಖ್ಯೆಯಲ್ಲಿ ಮಾರಾಟವಾಗುವುದು ಅಗಾಥ ಕ್ರಿಸ್ತಿಯ ಪತ್ತೇದಾರಿ ಪುಸ್ತಕಗಳು !

CPMG/KA/BG-8/99

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560 085

Book-Post/News Letter

To:
Smt/Sri M S Veda
643 Bakreshwara Road
Fort Mohalla
Mysore-570 004